


# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 73 | Saturday 23-11-2024 | E-mail : maruti.b.hosamani76@gmail.com | Page: 4 | Price : Rs. 1/-


# "ಪ್ರೀತಿಸಿ ನೋಡು" ನ.25 ರಿಂದ ಚಿತ್ರೀಕರಣ ಆರಂಭ

**ಸಿಹಿ ಕಹಿ ಸುದ್ದಿ,**
**ಬೆಂಗಳೂರು :** ಇದು ಸಿನಿಮಾ ಇಂಡಸ್ಟ್ರಿಯಲ್ಲಿ ಯಾರೂ ಯಾರನ್ನೂ ಕರೆದು ಅವಕಾಶ ಕೊಡುವುದಿಲ್ಲ, ನಾವೇ ಸೃಷ್ಟಿಸಿ ಕೊಳ್ಳಬೇಕು ಅಂತಾರೆ ರುದ್ರಾಕ್ಷಪುರಂ 3 ಕಿ.ಮಿ, ತ್ರಿಷಾ, ಈ ಸಿನಿಮಾಗೆ ಕ್ಲೈಮ್ಯಾಕ್ಷ ಇರುವುದಿಲ್ಲ , ಲಿಲ್ಲಿ ಮೊದಲಾದ ಚಿತ್ರಗಳ ನಿರ್ದೇಶಕ ಆರ್. ಕೆ. ಗಾಂಧಿ. ಒಂದು ಸಿನಿಮಾಗೆ ಒಬ್ಬರು, ಇಬ್ಬರು ಅಥವಾ ನಾಲ್ಕೈದು ಮಂದಿ ನಿರ್ಮಾಪಕರು ಇರುತ್ತಾರೆ, ಆದರೆ ಇಲ್ಲೊಂದು ಚಿತ್ರ ತಂಡ ಬರೋಬ್ಬರಿ ಮೂವತ್ತು ಮಂದಿ ಕಲಾವಿದ ಹಾಗೂ ತಂತ್ರಜ್ಞರು ಜೊತೆ ಗೂಡಿ 'ಸ್ನೇಹಾಲಯಂ' ಎಂಬ ಸಿನಿಮಾ ತಂಡ ರಚನೆ ಮಾಡಿಕೊಂಡು ನಿರ್ಮಾಣ ಮಾಡುತ್ತಿರುವುದು ವಿಶೇಷ. "ಪ್ರೀತಿಸಿ ನೋಡು" ಸಿನಿಮಾಗೆ ಹೀರೋ ಮಾರ್ವೆಲ್ ಮನುರಥ್, ಈಗಾಗಲೇ ಕನ್ನಡ ಸಿನಿಮಾ ರಂಗದಲ್ಲಿ ಪಬ್ಲಿಸಿಟಿ ಡಿಸೈನರ್ ಆಗಿ, ಫೈಟರ್ ಆಗಿ ಗುರುತಿಸಿ ಕೊಂಡಿದ್ದಾರೆ. "ಪ್ರೀತಿಸಿ ನೋಡು" ಎಂಬ ಲವ್ ಅಂಡ್ ಆಕ್ಷನ್ ಓರಿಯೆಂಟೆಡ್ ಸಿನಿಮಾ ಮುಖಾಂತರ ಹೀರೋ ಆಗಿ ಪಾದಾರ್ಪಣೆ ಮಾಡುತ್ತಿದ್ದಾರೆ. ಲಂಕಾಸುರ ಗುಲಾಲ್ ಮೊದಲಾದ ಸಿನಿಮಾಗಳಲ್ಲಿ ತನ್ನದೇ ಛಾಪು ಮೂಡಿಸಿರುವ ನಟಿ ಸಹನಾಗೌಡ ಈ ಚಿತ್ರಕ್ಕೆ ಹೀರೋಯಿನ್, ಭಲರಾಜ್ ವಾಡಿ ವಿಶೇಷ ಪಾತ್ರದಲ್ಲಿ ನಟಿಸುತ್ತಿರುವ "ಪ್ರೀತಿಸಿ ನೋಡು" ಚಿತ್ರದ ಚಿತ್ರೀಕರಣ ಬೆಂಗಳೂರು, ಚಿಕ್ಕಮಗಳೂರು, ಕೋಲಾರ, ಚಿಕ್ಕಬಳ್ಳಾಪುರ ಮೊದಲಾದ ಸ್ಥಳಗಳಲ್ಲಿ ನಡೆಯಲಿದೆ. ಚಿತ್ರಕ್ಕೆ ಪ್ರಮೋದ್ ಭಾರತೀಯ ಛಾಯಾಗ್ರಹಣ, ಅನಿರುದ್ಧ ಶಾಸ್ತ್ರಿ ಸಂಗೀತ, ತ್ರಿಲ್ಲರ್ ಮಂಜು ಸಾಹಸ. ಎಂ. ಜಿ. ಕಲ್ಲೇಶ್, ಡಾ, ಪ್ರಭು ಗಂಜಿಹಾಳ, ಡಾ, ವೀರೇಶ್ ಹಂಡಿಗಿ ಪಿ.ಆರ್.ಓ ಆಗಿ ಕಾರ್ಯ ನಿರ್ವಹಿಸುತ್ತಿರುವ ಈ ಚಿತ್ರಕ್ಕೆ ಆರ್.ಕೆ ಗಾಂಧಿ ಕಥೆ, ಚಿತ್ರಕಥೆ ,ಸಂಭಾಷಣೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಉಳಿದ ಕಲಾವಿದರು ಹಾಗೂ ತಂತ್ರಜ್ಞರ ಆಯ್ಕೆ ನಡೆಯುತ್ತಿದ್ದು ನವೆಂಬರ್ 25 ರಿಂದ ಚಿತ್ರೀಕರಣ ಪ್ರಾರಂಭ ಆಗಲಿದೆ ಎಂದು ನಿರ್ದೇಶಕ ಆರ್.ಕೆ. ಗಾಂಧಿ ಹೇಳಿದ್ದಾರೆ.




–ಡಾ.ಪ್ರಭು ಗಂಜಿಹಾಳ
ಮೊ:9448775346

# ಗೋವಾದಲ್ಲಿ ಅಂತರ್ ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಪ್ರಶಸ್ತಿ ಪಡೆದು ಕೊಂಡ – ಕೂಡ್ಲಿಗಿಯ ಕಲಾವಿದರು ಮತ್ತು ಸಮಾಜ ಸೇವಕರು

**ಸಿಹಿ ಕಹಿ ಸುದ್ದಿ,**
**ಕೂಡ್ಲಿಗಿ :** ಗೋವಾದಲ್ಲಿ ರವೀಂದ್ರ ಕಲಾ ಭವನದಲ್ಲಿ ಚಿರಾಯು ಕನ್ನಡ ಡಿಜಿಟಲ್ ಮೀಡಿಯಾ ಹಾಗೂ ಶ್ರೀನಿಧಿ ಫೌಂಡೇಶನ್ ರಿಜಿಸ್ಟರ್ ಕರ್ನಾಟಕ ಇವರ ಸಹ ಯೋಗದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಅಂತರ ರಾಜ್ಯ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಎಂಟು ಜನ ಕಲಾವಿದರು ಮತ್ತು ಸಮಾಜ ಸೇವಕರಿಗೆ ಕರುನಾಡ ಕಲಾ ರತ್ನ ಮತ್ತು ರಾಷ್ಟ್ರೀಯ ಕೃಷಿ ಕಾಯಕಯೋಗಿ ಪ್ರಶಸ್ತಿಯನ್ನು ನೀಡಿದರು ಪ್ರಶಸ್ತಿಯನ್ನು ಪಡೆದು ಕೊಂಡ ಬಣಕಾರ್ ಮೋಗಪ್ಪ ಕಲಾವಿದರು. ಜಯಮ್ಮರ ರಾಘವೇಂದ್ರ ಕಲಾವಿದರು. ಕೊಟ್ರೇಶ್ ಬಣಕಾರ್ ಮಂಜುನಾಥ್ ಜಿ ಬೇವೂರು ದೇವೇಂದ್ರಪ್ಪ ಕಡ್ಡಿ ಮಂಜುನಾಥ್ ಕೂಡ್ಲಿಗಿ ಹಾಗೂ ಎಮ್ ಬಸವರಾಜ್ ಕಕ್ಕುಪ್ಪಿ ಇವರಿಗೆ ಅಂತರ್ ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಮುಡಿಗೇರಿಸಿ ಕೊಂಡಿರುವುದು ಕೂಡ್ಲಿಗಿ ತಾಲೂಕಿಗೆ ಹೆಮ್ಮೆಯ ವಿಷಯವಾಗಿದೆ. ಅನೇಕ ಉತ್ತಮ ಸಮಾಜ ಸೇವೆಗಳು ಮತ್ತು ಇತ್ತೀಚಿಗೆ ಕಲೆಯನ್ನು ಪ್ರೋತ್ಸಾಹಿಸಿ ಕಲೆಯನ್ನು ಉಳಿಸುವುದರ ಜೊತೆಗೆ ಕಲೆಯನ್ನು ಬೆಳೆಸುವ ಕೆಲಸವನ್ನು ಮಾಡುತ್ತಿರುವ ಇವರೆಲ್ಲರಿಗೂ ಕೂಡ ಸನ್ಮಾನ ಮಾಡಿರುವುದು ಉತ್ತಮ ಬೆಳವಣಿಗೆ ಶ್ರೀನಿಧಿ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷರಾದ ಡಾ, ಮಂಜುನಾಥ್ ಎನ್ ಶಿವಕ್ಕನವರು ಕಾರ್ಯಕ್ರಮವನ್ನು ಆಯೋಜಿಸಿದ್ದರು. ಸಮ್ಮೇಳನದ ಅಧ್ಯಕ್ಷತೆಯನ್ನು ಡಾಕ್ಟರ್ ನಾಗರತ್ನ ಎಸ್ ಶೆಟ್ಟಿ ಇವರು ಅಧ್ಯಕ್ಷತೆಯನ್ನು ವಹಿಸಿದ್ದರು. ಇನ್ನೂ ಅನೇಕ ರಾಜ್ಯಾದ್ಯಂತ ಬಂದ ಅನೇಕ ಸಮಾಜ ಸೇವಕರಿಗೆ ಮತ್ತು ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರಿಗೆ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಯಿತು.



**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್.ವೀರೇಶ್ ಕೆ.ಹೊಸಹಳ್ಳಿ**

# ಪರಿಶಿಷ್ಟ ಪಂಗಡ ಜನರಿಲ್ಲದ ಏರಿಯಾದಲ್ಲಿ ಅನುದಾನ ಬಳಕೆ – ಕಣ್ಣಿದ್ದು ಕುರುಡಾದ ಮಹಾಲಿಂಗಪ್ಪ

**ಸಿಹಿ ಕಹಿ ಸುದ್ದಿ,**
**ಮಾನ್ವಿ:** ಸರಕಾರ ಪರಿಶಿಷ್ಟ ಜಾತಿ ಮತ್ತು ಪಂಗಡ ಜನರ ಅಭಿವೃದ್ಧಿಗಾಗಿ ಕೋಟಿಗಟ್ಟಲೆ ಅನುದಾನ ಕೊಟ್ಟರೆ, ಸಿರವಾರ ತಾಲೂಕಿನ ಸೈದಾಪುರ ಗ್ರಾಮದಲ್ಲಿ ಪರಿಶಿಷ್ಟ ಪಂಗಡದ ಜನರಿಲ್ಲದ ರಸ್ತೆಗೆ ಲಕ್ಷಾಂತರ ರುಪಾಯಿ ಎಸ್ಟಿ ಅನುದಾನ ದುರ್ಬಳಕೆ ಮಾಡಿರುವುದು ಬೆಳಕಿಗೆ ಬಂದಿದೆ. ವಾಲ್ಮೀಕಿ ನವ ಸಮಾಜ ಸಂಘದ ಉತ್ತರ ಕರ್ನಾಟಕ ವಿಭಾಗೀಯ ಅಧ್ಯಕ್ಷ ಲಿಂಗಯ್ಯ ನಾಯಕ ಅವರು ಮಾನ್ವಿ ಪರಿಶಿಷ್ಟ ಪಂಗಡ ಇಲಾಖೆಯ ತಾಲೂಕ ಅಧಿಕಾರಿ ಮಹಾಲಿಂಗಪ್ಪ ಅವರಿಗೆ ದೂರು ಕೊಟ್ಟರು ಕ್ಯಾರೆ ಅನ್ನುತ್ತಿಲ್ಲ ವಾಗಿದೆ. ಪರಿಶಿಷ್ಟ ಬಜನಾಂಗವನ್ನು ಅಭಿವೃದ್ಧಿ ಮಾಡಲು ಮಹಾಲಿಂಗಪ್ಪ ಇದ್ದಾರ ಅಥವಾ ದ್ರೋಹ ಮಾಡಲು ಇದ್ದಾರ ಎಂದು ತಿಳಿಯದಾಗಿದೆ ಎಂದು ಲಿಂಗಯ್ಯನಾಯಕ ಆರೋಪಿಸಿದ್ದಾರೆ.
ಸೈದಾಪುರ ಗ್ರಾಮವು ಮಾನ್ವಿ ವಿಧಾನ ಸಭಾ ಕ್ಷೇತ್ರಕ್ಕೆ ಬರುತ್ತಿದ್ದು, ಶಾಸಕ ಹಂಪಯ್ಯ ನಾಯಕ ಅವರು ಈ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿ ಪರಿಶಿಷ್ಟ ಪಂಗಡದ ಅನುದಾನವನ್ನು ದುರ್ಬಳಕೆ ಮಾಡಿದ ಲ್ಯಾಂಡ್ ಆರ್ಮಿ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು ಎಂದು ಲಿಂಗಯ್ಯನಾಯಕ ಒತ್ತಾಯಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**




# ಆಂಗ್ಲಮಾಧ್ಯಮ ಶಾಲೆಯಲ್ಲಿ ಕಲರವಿಸಿದ ಕನ್ನಡ ಸಂಸ್ಕೃತಿ

**ಮಹಾಲಿಂಗಪುರ :** ಸಮೀಪದ ಢವಳೇಶ್ವರ ಗ್ರಾಮದ ವಿವೇಕಾನಂದ ಆಂಗ್ಲ ಮಾಧ್ಯಮ ಪಬ್ಲಿಕ್ ಶಾಲೆಯಲ್ಲಿ ಮಕ್ಕಳಿಂದ ಅಪ್ಪಟ ಕನ್ನಡ ಸಂಸ್ಕೃತಿಯ ಕಲರವದ ರಾಜ್ಯೋತ್ಸವ ಕಾರ್ಯಕ್ರಮ ಮನಮೋಹಕವಾಗಿ ಜರುಗಿತು.
1ರಿಂದ 5ನೇ ತರಗತಿ ವಿದ್ಯಾರ್ಥಿಗಳು ನಾಡಗೀತೆ ಹಾಡಿ, ವಚನ ಹೇಳಿ, ಕನ್ನಡ ನಾಡಿನ ಹಿರಿಮೆ ಬಗ್ಗೆ ಭಾಷಣ ಮಾಡಿ, ದೇಸಿ ಉಡುಗೆಯಲ್ಲಿ ಜಾನಪದ ಹಾಡುಗಳಿಗೆ ನೃತ್ಯ ಮಾಡಿ ರಂಜಿಸಿದರು.
ನಾಡಿನ ದಿಗ್ಗಜರ, ಮಹನೀಯರ ಛದ್ಮವೇಷದಲ್ಲಿ ಕಂಗೊಳಿಸಿದರು. ಚಿತ್ರದುರ್ಗದ ಓಬವ್ವ ನುಸುಳುಕೋರರರನ್ನು ಕೊಂದು ಅಮರಳಾದ ವೀರಗಾಥೆಯ ನಾಟಕವನ್ನು ತಮ್ಮ ವೀರಾಭಿನಯದ ಮೂಲಕ ಪ್ರದರ್ಶಿಸಿ ವಿಶೇಷ ಪ್ರಶಂಸೆಗೆ ಪಾತ್ರರಾದರು.
ವಿದ್ಯಾರ್ಥಿಗಳಿಗೆ ರಾಜ್ಯೋತ್ಸವ ನಿಮಿತ್ತ ಏರ್ಪಡಿಸಿದ್ದ ನಾನಾ ಸ್ಪರ್ಧೆಗಳ ವಿಜೇತರಿಗೆ ಪ್ರಶಸ್ತಿಪತ್ರ ಮತ್ತು ಬಹುಮಾನ ವಿತರಿಸಲಾಯಿತು. ಎಲ್ಲ ಮಕ್ಕಳ ಪಾಲಕರನ್ನು ಕರೆಸಿ ಹೊನಲು ಬೆಳಕಿನಲ್ಲಿ ರಾರಾಜಿಸುವಂತೆ ರಾಜ್ಯೋತ್ಸವವನ್ನು ಆಚರಿಸಿದ್ದು ಗ್ರಾಮಸ್ಥರಲ್ಲಿ ಸಂಚಲನ ಉಂಟು ಮಾಡಿತು.
ಢವಳನಾಥ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಕಲ್ಮೇಶ ನೇಗಿನಹಾಳ ಮತ್ತು ಕೆಎಲ್ಇ ಕಾಲೇಜ್ ಉಪನ್ಯಾಸಕ ಶಿವಲಿಂಗ ಸಿದ್ನಾಳ ಮಾತನಾಡಿ, ಆಂಗ್ಲಮಾಧ್ಯಮ ಶಾಲೆಯ ಕನ್ನಡ ಕಳಕಳಿ ಮತ್ತು ಮಕ್ಕಳನ್ನು ಜಾನಪದ ಜಾಣರನ್ನಾಗಿ, ಕನ್ನಡ ಸಂಸ್ಕೃತಿಯ ಸಂಸ್ಕಾರವಂತರನ್ನಾಗಿ ಪಳಗಿಸಿದ ರೀತಿ ಶ್ಲಾಘನೀಯ ಎಂದರು. ಉಭಯ ಅತಿಥಿಗಳನ್ನು ಸನ್ಮಾನಿಸಲಾಯಿತು.
ಸಂಸ್ಥೆಯ ಅಧ್ಯಕ್ಷ ಡಿ.ಎಸ್.ಪಟ್ಟಣಶೆಟ್ಟಿ, ಶಾಲೆಯ ಆಡಳಿತಾಧಿಕಾರಿ ಅಭಿಷೇಕ ಚೌಗಲಾ, ಮುಖ್ಯ ಶಿಕ್ಷಕಿ ಅನುಶ್ರೀ ಚೌಗಲಾ, ಅಮರೇಸ ಕಾಂಬಳೆ, ಪೂಜಾ ಬಿರಡಿ, ಆಶಾ ತಿಮ್ಮನಗೋಳ, ಗೀತಾ ಅಂಬಿಗೇರ, ಸವಿತಾ ಚನ್ನಾಳ, ಶ್ರುತಿ ಚನ್ನಾಳ ಇದ್ದರು.




# ರಾಷ್ಟ್ರೀಯ ಪತ್ರಿಕಾ ದಿನಾಚರಣೆ




**ಮಹಾಲಿಂಗಪುರ :** ಪತ್ರಕರ್ತರು ನಿತ್ಯ ನಿರಂತರ ಧೈರ್ಯ, ಸತ್ಯ, ನಿಷ್ಠೆ, ಪ್ರಾಮಾಣಿಕತೆಯಿಂದ ತಮ್ಮ ಬರವಣಿಗೆಯ ಮೂಲಕ ಸಮಾಜಕ್ಕೆ ಉತ್ತಮ ಮೌಲ್ಯಗಳನ್ನು ನೀಡುವ ಮಹಾನ ವ್ಯಕ್ತಿಗಳಾಗಬೇಕು. ಮಹಾವಿದ್ಯಾಲಯಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಗುರುಗಳಾಗಿದರೇ, ಪತ್ರಕರ್ತರು ಸಮಾಜಕ್ಕೆ ಗುರುವಿನಂತೆ, ಸಮಾಜದ ಕಟ್ಟ ಕಡೆಯ ವ್ಯಕ್ತಿಯ ಧ್ವನಿಯಾಗಿ ನಿಲ್ಲಬೇಕು ಎಂದು ಪತ್ರಕರ್ತ ನಾರನಗೌಡ ಉತ್ತಂಗಿ ಹೇಳಿದರು.
ಶನಿವಾರ ಪಟ್ಟಣದ ಕೆ.ಎಲ್.ಇ ಸಂಸ್ಥೆಯ ಎಸ್‌ಸಿಪಿ ಪದವಿ ಮಹಾವಿದ್ಯಾಲಯದಲ್ಲಿ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪತ್ರಿಕಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಪತ್ರಿಕಾರಂಗ ಸಮಾಜದ ಒಳಿತು ಕೆಡುಕುಗಳನ್ನ ಎತ್ತಿ ತೋರಿಸಿ, ಪ್ರತಿಯೊಬ್ಬ ಪ್ರಜೆಗಳಿಗೂ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಪತ್ರಿಕಾರಂಗ ಇಂದು ದಿವ್ಯಶಕ್ತಿಯಾಗಿ ಸಮಾಜದ ಪೂರಕವಾಗಿ ಕೆಲಸ ಮಾಡುತ್ತಿದೆ ಎಂದರು.
ಅಧ್ಯಕ್ಷತೆವಹಿಸಿದ್ದ ಪ್ರಾಚಾರ್ಯ ಡಾ.ಕೆ. ಎಂ.ಅವರಾದಿ ಮಾತನಾಡಿ ಪತ್ರಿಕಾ ರಂಗಕ್ಕೆ ಬಲ ತುಂಬಲು 1966ರಲ್ಲಿ ರಾಷ್ಟ್ರೀಯ ಪತ್ರಿಕಾ ರಂಗ ಸ್ಥಾಪನೆಯಾದರೂ ಸಹ ಪತ್ರಿಕಾರಂಗದ ಬಲವರ್ಧನೆ ಇನ್ನು ಆಗಿಬೇಕಿದೆ. ಪತ್ರಿಕಾರಂಗ ಬಂಡವಾಳಶಾಹಿಗಳ ಹಿಡಿತಕ್ಕೆ ಸಿಕ್ಕು ಪತ್ರಿಕಾ ಸ್ವಾತಂತ್ರ್ಯದ ದಬ್ಬಾಳಿಕೆಯಾಗಬಾರದು. ಸತ್ಯ ಹೇಳುವ ಸಾಮರ್ಥ್ಯ ಬರಬೇಕಿದೆ, ಪತ್ರಿಕೆಗಳು, ಪತ್ರಕರ್ತರು ಸ್ವತಂತ್ರರಾಗಿ ಸಮಾಜ ಸೇವೆ ಸಲ್ಲಿಸಬೇಕು ಎಂದರು. ಐಕ್ಯೂಎಸಿ ಸಹ ನಿರ್ದೇಶಕ ವಿ.ಎ.ಅಡಹಳ್ಳಿ, ಸಿಬ್ಬಂದಿ ಕಾರ್ಯದರ್ಶಿ ಆರ್. ಎಸ್.ಪೂಜಾರಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಆರ್.ವಿ.ಚೌಗಲಾ, ಉಪನ್ಯಾಸಕ ಬಸವರಾಜ ಐ.ಪಿ, ಪಿ.ಎಂ.ಗೌಳಿ ಮತ್ತು ವಿದ್ಯಾರ್ಥಿಗಳು ಇದ್ದರು.

# ದೀಪಕ ಶಿಂಧೆಯವರಿಗೆ ಪಿ.ಎಚ್.ಡಿ. ಪ್ರದಾನ



**ರಬಕವಿ–ಬನಹಟ್ಟಿ :** ಇಲ್ಲಿನ ದೀಪಕ ಶಿಂಧೆ ಅವರು ಮಂಡಿಸಿದ ಸ್ಟಡೀಸ್ ಆನ್ ಒಪಿಯೊಡರ್ಜಿಕ್ ರೆಗ್ಯುಲೇಶನ್ ಆಫ್ ಪಿಟ್ಯುಟರಿ ಟೆಸ್ಟಿಕ್ಯುಲಾರ್ ಎಕ್ಸಿಸ್ ಇನ್ ದಿ ಫಿಶ್ ಒರಿಯಕ್ರೋಮಿಸ್ ಮೊಸಂಬಿಕಸ್ ಎಂಬ ವಿಷಯವನ್ನು ಮನ್ನಿಸಿ ಕರ್ನಾಟಕ ವಿಶ್ವವಿದ್ಯಾಲಯ ಪಿ. ಎಚ್. ಡಿ. ಪದವಿಯನ್ನು ನೀಡಿದೆ. ಧಾರವಾಡದ ಕರ್ನಾಟಕ ವಿಶ್ವ ವಿದ್ಯಾಲಯದ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗದ ಡಾ. ಸಿ. ಬಿ. ಗಣೇಶ ಮಾರ್ಗದರ್ಶನ ಮಾಡಿದ್ದರು.

# ಶರಣ ರವಿ ಗೆದ್ದೆಪ್ಪನವರ ಅವರಿಗೆ ಪ್ರಶಸ್ತಿ



**ರಬಕವಿ–ಬನಹಟ್ಟಿ :** ದಿ. 17 ರಂದು ಗೋವಾ ರಾಜ್ಯದಲ್ಲಿ 'ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆಯುವ ರಾಷ್ಟ್ರ ಮಟ್ಟದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಆಯೋಜಿಸಿರುವ ಗೌರವ ಪ್ರಶಸ್ತಿ ಪುರಸ್ಕಾರ ಸಮಾರಂಭದಲ್ಲಿ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಕೊಡಮಾಡುವ "ಕರುನಾಡ ರತ್ನ ಮತ್ತು ಪುನೀತ ರಾಜಕುಮಾರ ಸದ್ಭಾವನಾ ಪ್ರಶಸ್ತಿ" ಬನಹಟ್ಟಿಯ ಗುರುಬಸವ ಮನೆಯಲ್ಲಿ ಮಹಾಮನೆಯ ಶರಣರಾದ ರವಿ ಗೆದ್ದೆಪ್ಪನವರ ಅವರಿಗೆ ಲಭಿಸಿದೆ. ಅವರಿಗೆ ಧಡಲ್ ಬಾಜಿ ಕನ್ನಡ ದಿನಪತ್ರಿಕೆಯ ಬಳಗದಿಂದ ಹಾರ್ದಿಕ ಶುಭಾಶಯಗಳು.



**ರಬಕವಿ–ಬನಹಟ್ಟಿ : ಈಚೆಗೆ ಮಹಾರಾಷ್ಟ್ರದ ಸಂಭಾಜಿನಗರದಲ್ಲಿ (ಮೊದಲಿನ ಔರಂಗಾಬಾದ್) ಭಾರತೀಯ ವೈದ್ಯಕೀಯ ಅಶೋಶಿಯೇಶನ್ನಿಂದ ಜರುಗಿದ 20 ಕಿ.ಮೀ. ಸೈಕಲ್ ರೇಸ್ನಲ್ಲಿ ಬನಹಟ್ಟಿಯ ಡಾ. ಸೋಮನಾಥ ಬಡೇಮಿ ಅವರಿಗೆ ರಜತ ಪದಕ ಹಾಗು ರಬಕವಿಯ ಡಾ. ಪದ್ಮಜೀತ ನಾಡಗೌಡ ಪಾಟೀಲ ಅವರಿಗೆ ಕಂಚಿನ ಪದಕ ದೊರೆತು ಅಪೂರ್ವ ಸಾಧನೆ ಮಾಡಿದ್ದಾರೆ. ಇಬ್ಬರೂ ವೈದ್ಯ ಮಿತ್ರರಿಗೆ ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಹಾದಿಈಕ ಅಭಿನಂದನೆಗಳು.**

# ಬೂಕನಕೆರೆಯಲ್ಲಿ ಬೃಹತ್ ಮದ್ಯವರ್ಜನ ಶಿಬಿರದ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿದ ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್

**ಕೆ.ಆರ್.ಪೇಟೆ :** ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿ0ದ ತಾಲೂಕಿನ ಬೂಕನಕೆರೆ ಗ್ರಾಮದ ಪಂಚಾಯತ್ ಸಮುದಾಯ ಭವನದಲ್ಲಿ ಪದ್ಮವಿಭೂಷಣ ಪರಮಪೂಜ್ಯ ಡಾ.ಡಿ.ವೀರೇಂದ್ರ ಹೆಗ್ಗಡೆ , ಮತ್ತು ಮಾತೃಶ್ರೀ ಡಾ.ಹೇಮವತಿ ವಿ.ಹೆಗ್ಗಡೆ ರವರ ಶುಭಾಶೀರ್ವಾದದೊಂದಿಗೆ 1887ನೇ ಮದ್ಯ ವರ್ಜನ ಶಿಬಿರ ವ್ಯವಸ್ಥಾಪನಾ ಸಮಿತಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್(ರಿ),ಕೆ.ಆರ್.ಪೇಟೆ, ಅಖಿಲ ಕರ್ನಾಟಕ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ), ಬೆಳ್ತಂಗಡಿ, ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ಟ್ರಸ್ಟ್ (ರಿ) ಚನ್ನರಾಯಪಟ್ಟಣ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವ್ಯಸನ ಮುಕ್ತಿ ಮತ್ತು ಸಂಶೋಧನಾ ಕೇಂದ್ರ ಲ್ಯಾಲ ಉಜಿರೆ, ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು ಇವರ ಮಾರ್ಗದರ್ಶನದಲ್ಲಿ ಆಯೋಜಿಸಿದ್ದ 1887ನೇ ಮದ್ಯವರ್ಜನ ಶಿಬಿರದ ತಾಲ್ಲೋಕಿನ ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್ ಉದ್ಘಾಟನೆ ನೆರವೇರಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗ್ರಾಮಪಂಚಾಯತಿ ಅಧ್ಯಕ್ಷರಾದ ಬಿ.ಆರ್.ಶ್ಯಾಮ್ ಪ್ರಸಾದ್ ವಹಿಸಿದ್ದರು,ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರ ಆಶ ಯದಂತೆ ಧರ್ಮಸ್ಥಳ ಸಂಸ್ಥೆ ರಾಜ್ಯಾದ್ಯಂತ ಮದ್ಯ ವರ್ಜನ ಶಿಬಿರ ಆಯೋಜಿಸಿ ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸುತ್ತಿದೆ.ಬೂಕನಕೆರೆ ಗ್ರಾಮಸ್ಥರು ಇದರ ಸದುಪಯೋಗ ಪಡಿಸಿಕೊಂಡು ಮದ್ಯಪಾನ ಸೇವನೆಯನ್ನು ತ್ಯಜಿಸಿ ಕುಟುಂಬದ ಸದಸ್ಯರ ಜೊತೆ ಅನ್ಯೂನ್ಯವಾಗಿ ಜೀವನ ನೆಡೆಸುವಂತೆ ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್ ರವರು ತಿಳಿಸಿದರು,



ಜಿಲ್ಲಾ ನಿರ್ದೇಶಕರಾದ ಕೇಶವ ದೇವಾಂಗ ರವರು ಮಾತನಾಡಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ತಾಲ್ಲೋಕಿನಲ್ಲಿ ಮಹಿಳೆಯರ ಆರ್ಥಿಕ ಸ್ಥಿತಿ ಉತ್ತಮಗೊಳಿಸಿ ಸ್ವಾವಲಂಬನೆ ಜೀವನ ನಡೆಸಲು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಹಕಾರಿಯಾಗಿದೆ ಜೊತೆಗೆ ಮದ್ಯದ ಚಟದಿಂದ ಹಲವಾರು ಸಂಸಾರಗಳು ಕಷ್ಟದ ಪರಿಸ್ಥಿತಿಯಲ್ಲಿದೆ ಇದನ್ನು ಮನಗೊಂಡ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕುಡಿತದ ಚಟವನ್ನು ಬಿಡಿಸುವ ನಿಟ್ಟಿನಲ್ಲಿ ಈಗಾಗಲೇ 1887ನೇ ಮದ್ಯವರ್ಜನ ಶಿಬಿರದಂತಹ ಕಾರ್ಯಕ್ರಮ ಮಾಡುವ ಕುಡಿತವನ್ನು ಬಿಡಿಸುವ ಕಾರ್ಯಕ್ಕೆ ಮುಂದಾಗಿರುವುದಾಗಿ ಪ್ರಾಸ್ತಾವಿಕ ನುಡಿಗಳನ್ನು ತಿಳಿಸಿದರು,
ಈ ಉದ್ಘಾಟನಾ ಸಮಾರಂಭದಲ್ಲಿ ಗ್ರಾಪಂ ಅಧ್ಯಕ್ಷ ಬಿ.ಆರ್. ಶ್ಯಾಂಪ್ರಸಾದ್,ಬಿ.ಟಿ. ವೆಂಕಟೇಶ್, ಬಿ.ಜವರಾಯಿಗೌಡ, ಹುಲ್ಲೇಗೌಡ, ಗ್ರಾಮಭಿವೃದ್ಧಿ ಯೋಜನೆ ಜಿಲ್ಲಾ ನಿರ್ದೇಶಕ ಕೇಶವ ದೇವಾಂಗ,ಶೀಳನೆರೆ ಅಂಬರೀಷ್, ಯೋಜನಾಧಿಕಾರಿಗಳಾದ ತಿಲಕ್ ರಾಜ್,ಡಾ.ವೆಂಕಟೇಶ್, ಕೆ.ಎನ್.ರಾಜೇಶ್ ನಿಕಟಪೂರ್ವ ಅಧ್ಯಕ್ಷರು ಜನಜಾಗೃತಿ ವೇದಿಕೆ, ಸದಸ್ಯರಾದ ಪದ್ಮ, ನರಸಿಂಹರಾಜು,ಕೆ.ಎಸ್.ಸತೀಶ್, ಮಾಧ್ಯಮ ಸ್ಟುಡಿಯೋ ಸಂಮಿತ್ರರು ಪತ್ರಕರ್ತರಾದ ಲೋಕೇಶ್.ವಿ,ಎಸ್ ರವಿ. ಹೊನ್ನೇನಹಳ್ಳಿ ರಂಗನಾಥ್ ಮಾಕವಳ್ಳಿ,ಪ್ರಕಾಶ್ ಆಚಾರ್ಯ, ಮೇಲ್ವಿಚಾರಕರು ಹಾಗೂ ಸೇವಾ ಪ್ರತಿನಿಧಿಗಳು, ಪ್ರಗತಿಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟ, ಗ್ರಾಮಸ್ಥರು ಸೇರಿದಂತೆ ಮತ್ತಿತರು ಭಾಗವಹಿಸಿದ್ದರು,

**ವರದಿ; ಎಸ್ ರವಿ ಹೊನ್ನೇನಹಳ್ಳಿ**

# ಶಿವಶರಣ ಮೇದಾರ ಕೇತೇಶ್ವರರ 894ನೇ ಜಯಂತಿ ಆಚರಣೆ



**ಮಹಾಲಿಂಗಪುರ :** ಶುಕ್ರವಾರ ಪಟ್ಟಣದ ಮೇದಾರ ಬಡಾವಣೆಯಲ್ಲಿ ಶಿವಶರಣ ಮೇದಾರ ಕೇತಯ್ಯನವರ ಭಾವಚಿತ್ರ ಪೂಜೆಯೊಂದಿಗೆ 894ನೇ ಜಯಂತಿ ಆಚರಿಸಲಾಯಿತು.

ಸಮಾಜದ ಮುಖಂಡರಾದ ಹನುಮಂತ ಬುರುಡ, ಗಂಗಪ್ಪ ಬುರುಡ, ಶಿವಾನಂದ ಬುರುಡ, ಭೀಮಶಿ ಬುರುಡ, ಪರಶುರಾಮ ಬುರುಡ, ರವಿ ಬುರುಡ, ಮಲ್ಲಪ್ಪ ಬುರುಡ, ಈರಪ್ಪ ಬುರುಡ, ಮಹಾಂತೇಶ ಬುರುಡ, ಪ್ರಭು ಬುರುಡ, ಗಂಗಾಧರ ಬುರುಡ, ವೆಂಕಟೇಶ್ ಬುರುಡ, ಶಶಿಕಾಂತ ಬುರುಡ, ಸಂಗಮೇಶ ಬುರುಡ, ಹಣ್ಮಂತ ದುಂ.ಬುರುಡ, ನಾಗಪ್ಪ ಬುರುಡ, ಶಂಕರ ಬುರುಡ, ಮಹಾಲಿಂಗ ಬುರುಡ, ಬಸು ಬುರುಡ ಸೇರಿದಂತೆ ಹಲವರು ಇದ್ದರು.

## ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಕ್ಕಳೆ ಅಧ್ಯಕ್ಷರು ಮಕ್ಕಳೆ ಅತಿಥಿಗಳು

# ಕಲಿತ ಶಾಲೆ ಋಣವನ್ನು ತೀರಿಸೋಣ: ವಿದ್ಯಾರ್ಥಿ ಅರುಣ

**ಜಮಖಂಡಿ :** ಮಕ್ಕಳಾದ ನಾವು ಒಳ್ಳೆಯ ನಡೆನುಡಿಗಳನ್ನು ರೂಢಿಸಿಕೊಂಡು, ಇಷ್ಟಪಟ್ಟು ಕಲಿತ ಶಾಲೆ ಋಣವನ್ನು ತೀರಿಸಬೇಕು ಎಂದು ಶಾಲಾ ಪ್ರಧಾನ ಕಾರ್ಯದರ್ಶಿ ವಿದ್ಯಾರ್ಥಿ ಅರುಣ ಶಿಂಧೆ ಹೇಳಿದರು.

ತಾಲೂಕಿನ ಕುಂಬಾರಹಳ್ಳ ಸರಕಾರಿ ಪ್ರೌಢ ಶಾಲೆಯಲ್ಲಿ ಮಕ್ಕಳ ದಿನಾಚರಣೆ ವಿಶೇಷ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ವಿದ್ಯಾರ್ಥಿ ನಮ್ಮ ಮೇಲಿನ ಪ್ರೀತಿಯಿಂದ ಗುರುವೃಂದ ನಡೆಸಿದ ವಿವಿಧ ಸ್ಪರ್ಧೆಗಳು ಮತ್ತು ಸಭಾಕಾರ್ಯಕ್ರಮ ನಮ್ಮಲ್ಲಿ ಹೊಸ ಉತ್ಸಾಹ ಮೂಡಿಸಿದೆ. ಶಿಕ್ಷಕರ ಶಿಕ್ಷಣ ವ್ಯವಸ್ಥೆಗೆ ನಮ್ಮ ಮನೆ ಪಕ್ಕದ ಮಕ್ಕಳಲ್ಲಿ ಶಿಕ್ಷಣ ಆಸಕ್ತಿ ಹೆಚ್ಚಾಗುತ್ತಿದೆ ಎಂದರು.

ಮುಖ್ಯಅತಿಥಿ ಸ್ಥಾನ ವಹಿಸಿದ್ದ ವಿದ್ಯಾರ್ಥಿನಿ ಪ್ರತಿನಿಧಿ ಕಲಾವತಿ ಪೂಜಾರಿ ಮಾತನಾಡಿ, ಇಂಥಹ ಗುರುಗಳನ್ನು ಪಡೆದ ನಾವೆಲ್ಲರೂ ಧನ್ಯರು. ನಾವು ಊರಿಗೆ, ಗುರುಗಳಿಗೆ, ತಂದೆ ತಾಯಿಗಳಿಗೆ ಕೀರ್ತಿ ತರಬೇಕು. ನೆಹರು ಅವರ ಆದರ್ಶವನ್ನು ಅಳವಡಿಸಿಕೊಳ್ಳಬೇಕು. ನೆಹರುರವರ ಮಗಳಾದ ಇಂದಿರಾಗಾಂಧಿ ಯವರಂತೆ ಆಗಬೇಕೆಂದರು.



ಶಾಲಾ ಸಾಂಸ್ಕೃತಿಕ ಮಂತ್ರಿ ನಿಂಗವ್ವ ಮರನೂರ ಮಾತನಾಡಿ, ಇಂಥಹ ದಿನೋತ್ಸವಗಳು ನಮ್ಮಲ್ಲಿ ಜವಾಬ್ದಾರಿ ಹೆಚ್ಚಿಸುತ್ತವೆ. ಗುರಿ ಮುಟ್ಟಲು ಆತ್ಮಸ್ಥೈರ್ಯ ಹೆಚ್ಚಿಸುವ ನಿಟ್ಟಿನಲ್ಲಿ ನಮ್ಮ ನೆಚ್ಚಿನ ಶಿಕ್ಷಕರು ಜವಾಬ್ದಾರಿಯಿಂದ ಸೇವೆ ಸಲ್ಲಿಸುತ್ತಿದ್ದಾರೆ ಎಂದರು.

ವಿದ್ಯಾರ್ಥಿ ಪ್ರತಿನಿಧಿಗಳಾದ ಸಾಗರ ಕುರಣಿ, ರಾಹುಲ ಬಣಕಾರ, ಲಕ್ಷ್ಮಣ ನಾವಿ, ರಾಗಿಣಿ ಚಿಕ್ಕಲಕಿ, ವಿನಾಯಕ ಐನಾಪುರ ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಮಕ್ಕಳಿಗಾಗಿ ಏರ್ಪಡಿಸಿದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ಮಕ್ಕಳು ಹಾಡು, ಕವಿತೆ, ನಾಟಕ, ನರ್ತನ, ಭರತನಾಟ್ಯದ ಮೂಲಕ ತಮ್ಮ ಪ್ರತಿಭೆ ಪ್ರದರ್ಶಿಸಿದರು. ಮಕ್ಕಳ ರಕ್ಷಣಾ ಕ್ಲಬ್ ಉದ್ಘಾಟಿಸುವ ಮೂಲಕ ಸಲಹಾ ಪೆಟ್ಟಿಗೆಯನ್ನು ಮಕ್ಕಳಿಗೆ ಹಸ್ತಾಂತರಿಸಲಾಯಿತು.

ಮುಖ್ಯಶಿಕ್ಷಕ ನಾರಾಯಣ ಶಾಸ್ತ್ರಿ, ಶಿಕ್ಷಕರಾದ ಸಂಜೀವ ಝುಂಬುರೆ, ಸಂಗನಬಸವ ಉಟಗಿ, ಶಾರದಾ ಮಠ, ಬಾಹುಬಲಿ ಮುತ್ತೂರ, ಆಸೀಪಾಭಾನು ಮೋಮಿನ, ಸವಿತಾ ಬೆನಕಟ್ಟಿ, ಚಂದ್ರಕಾಂತ ಪೊಲೀಸ ಸಹಿತ ಹಲವರು ಇದ್ದರು.

# ಮಿಲ್ಲತ್ ಶಾಲೆಯಲ್ಲಿ ಕರೀಂ ಪಾಷಾಗಚ್ಚಿಮನಿಗೆ ಸನ್ಮಾನ



**ಕೊಪ್ಪಳ :** ನಗರದ ಮಿಲ್ಲತ್ ಪಬ್ಲಿಕ್ ಶಾಲೆಯಲ್ಲಿ ಮಿಲ್ಲತ್ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆ ವತಿಯಿಂದ ಏರ್ಪಡಿಸಿದ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಮಾಜ ಸೇವಕ ,ಉದ್ಯಮಿ, ಲ್ಯಾಂಡ್ ಡೆವಲೋಪರ್ ಕರೀಂ ಪಾಷಾ ಗಚ್ಚಿನಮನಿ ಯವರಿಗೆ ಸಂಸ್ಥೆಯ ಪರವಾಗಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಯುವ ನಾಯಕ ,ಉದ್ಯಮಿ, ಲ್ಯಾಂಡ್ ಡೆವಲೋಪರ್ ಎಂಡಿ ಇಬ್ರಾಹಿಂ ಪಟೇಲ್, ಸಂಸ್ಥೆಯ ಆಡಳಿತ ಮಂಡಳಿ ನಿರ್ದೇಶಕರಾದ ಹಿರಿಯ ಪತ್ರಕರ್ತ ಎಂ ಸಾಧಿಕ್ ಅಲಿ, ಅಂಜುಮನ್ ಕಮಿಟಿ ಅಧ್ಯಕ್ಷ ಎಂ ಡಿ ಆಸಿಫ್ ಕರ್ಕಿಹಳ್ಳಿ, ಶಾಲೆಯ ಕಾರ್ಯನಿರ್ವಾಹಕ ಸಂಚಾಲಕರಾದ ಅಬ್ದುಲ್ ಅಜೀಜ್ ಮಾನ್ವಿ ಕರ್, ಸೈಯದ್ ಇಮಾಮ್ ಹುಸೇನ್ ಸಿಂದೋಗಿ ಶಾಲೆಯ ಮುಖ್ಯ ಶಿಕ್ಷಕ ಮೊಹಮ್ಮದ್ ಅಜೀಜ್ ರೆವಡಿ,

ಹಿರಿಯ ಶಿಕ್ಷಕ ನರಸಿಂಹ ದೇಸಾಯಿ ಸೇರಿದಂತೆ ಸಹಶಿಕ್ಷಕರು ಗಳು ವಿದ್ಯಾರ್ಥಿ ಗಳು ಮತ್ತು ಪಾಲಕರು ಉಪಸಿತರಿದ್ದರು,

## ರೋವರ್ ಹಾಗೂ ರೇಂಜರ್ ಘಟಕಗಳ ಉದ್ಘಾಟನೆ

# ರೋವರ್ ಹಾಗೂ ರೇಂಜರ್ ಘಟಕದಿಂದ ಶಿಸ್ತು ನಾಯಕತ್ವ ವೃದ್ದಿ

**ಬಾದಾಮಿ :** ನಮ್ಮ ಸಂಸ್ಥೆಯಲ್ಲಿ ಈಗಾಗಲೇ ಎನ್.ಎಸ್.ಎಸ್ ಹಾಗೂ ಎನ್.ಸಿ.ಸಿ ಘಟಕಗಳಿದ್ದು ಇದರೊಂದಿಗೆ ರೋವರ್ ಹಾಗೂ ರೇಂಜರ್ ಘಟಕಗಳು ಪ್ರಾರಂಭವಾಗಿದ್ದು ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಪ್ರಾಚಾರ್ಯ ಪಿ.ಎಸ್.ಜವಳಿ ಹೇಳಿದರು

ಎಸ್.ಜಿ.ಎಂ.ಕೆ ಮಹಾವಿದ್ಯಾಲಯದಲ್ಲಿ ವೀರಪುಲಿಕೇಶಿ ರೋವರ್ ಹಾಗೂ ರೇಂಜರ್ ಘಟಕಗಳ ಉದ್ಘಾಟನೆಯನ್ನು ಮಾಡಿ ಮಾತನಾಡಿದರು, ವಿದ್ಯಾರ್ಥಿಗಳು ರೋವರ್ ಹಾಗೂ ರೇಂಜರ್ ಘಟಕಗಳ ತೊಡಗಿಕೊಂಡು ಉತ್ತಮ ಕಾರ್ಯಗಳ ಮೂಲಕ ಸಮಾಜ ಸೇವೆಯೊಂದಿಗೆ ರಾಜ್ಯಪಾಲರ ಹಾಗೂ ರಾಷ್ಟ್ರಪತಿಗಳಿಂದ ಪದಕ ಪಡೆದರೆ ಉನ್ನತ ವ್ಯಾಸಂಗದಲ್ಲಿ 5% ಮೀಸಲು ಪಡೆಯಬಹುದು ಈ ಅವಕಾಶ ಪಡೆದುಕೊಳ್ಳಿ ಎಂದು ಕಿವಿಮಾತು ಹೇಳಿದರು,



ಉಪನ್ಯಾಸಕಿ ಪಾರ್ವತಿ ಲೆಂಕೆನ್ನವರ ಮಾತನಾಡಿ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಈ ಘಟಕಗಳಲ್ಲಿ ಭಾಗವಹಿಸುವ ಮೂಲಕ ಸಮಾಜಸೇವೆಯ ಜೊತೆಗೆ ಶಿಸ್ತು, ನಾಯಕತ್ವ ಗುಣಗಳನ್ನು ಪಡೆಯಬಹುದಾಗಿದೆ ಎಂದರು,

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಡಾ.ಅವಿನಾಶ ಮಮದಾಪೂರ, ವೀರಪುಲಿಕೇಶಿ ರೋವರ್ಸ ಘಟಕದ ಮುಖ್ಯಸ್ಥ ಎಂ.ಜೆ ಪತ್ರಿಮಠದ, ರೇಂಜರ್ ಘಟಕದ ಮುಖ್ಯಸ್ಥೆ ಶ್ರೀಮತಿ ಸುಧಾ ಎಂ, ಉಪನ್ಯಾಸಕರಾದ ಗುರುಚನ್ನ ಮಾಳವಾಡ, ಎಂ.ಐ ಹುಲ್ಲೂರ, ಆರ್.ಎಸ್ ಕುರುಮನಾಳ,

ಆನಂದ ನಾಡಗೌಡ್ರ ಇದ್ದರು.

# ವಸಂತರಾವ್ ತಿ. ಕುಲಕರ್ಣಿ ನಿಧನ



**ಮುಧೋಳ :** ಇಲ್ಲಿನ ವಿಪ್ರ ಸಮಾಜದ ಹಿರಿಯರು, ನಿವೃತ್ತ ಉಪ ತಹಶೀಲ್ದಾರರು, ಬ್ರಾಹ್ಮಣ ಗಲ್ಲಿಯ ನಿವಾಸಿ ವಸಂತರಾವ್ ತಿಮ್ಮಾಜಿರಾವ್ ಕುಲಕರ್ಣಿ ತಮ್ಮ 89 ನೆಯ ವಯಸ್ಸಿನಲ್ಲಿ ನವೆಂಬರ 15 ರಂದು ವೈಕುಂಠವಾಸಿಯಾದರು.

ಮೃತರು ತಮ್ಮ ಹಿಂದೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ.

# ಮೇದಾರ ಕೇತಯ್ಯ ಆದರ್ಶ ಪಾಲಿಸಿ



**ಗುಳೇದಗುಡ್ಡ :** ಬಿದರಿನ ಬುಟ್ಟಿ ಹೆಣೆಯುವ ಕಾಯಕದೊಂದಿಗೆ ಬದುಕು ಕಟ್ಟಿಕೊಂಡಿದ್ದ ಕಾಯಕ ಯೋಗಿಕೇತಯ್ಯನವರಆದರ್ಶಜೀವನನಮ್ಮಯುವ ಪೀಳಿಗೆಗೆ ಮಾದರಿಯಾಗಲಿ. ಸಮಾಜದಲ್ಲಿ ಶಿಕ್ಷಣಕ್ಕೆ ಆದ್ಯತೆನೀಡಿಸಮಾಜಸಂಘಟನೆಗೆಮಹತ್ವನೀಡಬೇಕು. ಯುವಕರು ಕೇತಯ್ಯನವರ ಆದರ್ಶ ಸದ್ಗುಣಗಳನ್ನು ಬದುಕಿನಲ್ಲಿ ಅವಳವಡಿಸಿಕೊಳ್ಳಬೇಕೆಂದು ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಹೇಳಿದರು.

ಅವರು ಪಟ್ಟಣದಲ್ಲಿ ಶಿವಗೌರಿ ಮೇದಾರ ಕೇತಯ್ಯ ಸಮಾಜದ ವತಿಯಿಂದ ಶಿವಶರಣ ಶಿವಗೌರಿ ಮೇದಾರಕೇತೇಶ್ವರಜಯಂತಿಆಚರಣೆಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಮೇದಾರ ಸಮಾಜ ಅತ್ಯಂತ ಚಿಕ್ಕ ಸಮಾಜ. ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಎಲೆಸಿದ್ದು ಪ್ರತಿಯೊಬ್ಬರನ್ನೂ ಬಹಳಷ್ಟು ಪ್ರೀತಿ, ಗೌರವದೊಂದಿಗೆ ಕಾಣುವ ಸಮಾಜ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಬೆಳೆಯಲಿ ಎಂದರು.

ಶ್ರೀಜಗದ್ಗುರು ಬಸವರಾಜ ಪಟ್ಟದಾರ್ಯ ಶ್ರೀಗಳು, ಶ್ರೀ ಕಾಶೀನಾಥ ಶ್ರೀಗಳು ಸಾನಿಧ್ಯ ವಹಿಸಿ ಮಾತನಾಡಿ, ಶಿವಶರಣ ಮೇದಾರ ಕೇತೇಶ್ವರರು ಹಾಕಿಕೊಟ್ಟ ಆದ–ರ್ಶ ಮಾರ್ಗದಲ್ಲಿ ನಾವೆಲ್ಲ ನಡೆಯಬೇಕು. ಶರಣ ಕೇತಯ್ಯನವರು ಆದರ್ಶ ಸಂಸ್ಕಾರ, ಸಂಸ್ಕೃತಿಯ ಮೂಲಕ ಸಮಾಜಕ್ಕೆ ಭದ್ರ ಬುನಾದಿ ಹಾಕಿ ಕೊಟ್ಟಿದ್ದಾರೆ ಎಂದರು.

ಶಿವಗೌರಿ ಮೇದಾರ ಕೇತಯ್ಯ ಸಮಾಜ ಅಧ್ಯಕ್ಷ ಈಶಪ್ಪ ಮೇದಾರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಅಮೀನಗಡ ಪಟ್ಟಣ ಪಮಚಾಯತಿ ಸದಸ್ಯ ಸಂಜೀವ ಐಹೊಳೆ, ದಿಗಂಬ್ರಪ್ಪ ಮೇದಾರ, ಯಲ್ಲಪ್ಪ ಮೇದಾರ, ಶಂಕ್ರಪ್ಪ ಐಹೊಳೆ,

ಶಿವಪುತ್ರಪ್ಪ ಮೇದಾರ, ಲಕ್ಷ್ಮಣ ಮೇದಾರ, ಗಣೇಶ ಮೇದಾರ, ವಿಠ್ಠಲ ಮೇದಾರ, ಮಂಜು ಮೇದಾರ, ಬಾಬು ರಾಯಚೂರ, ಶ್ರೀನಿವಾಸ ಮೇದಾರ, ಮಲ್ಲಿಕಾರ್ಜುನ ಗೌಡ್ರ, ಯಮನಪ್ಪ ಮೇದಾರ ಇತರರು ಇದ್ದರು.

ಮೆರವಣಿಗೆ: ಶಿವಶರಣ ಮೇದಾರ ಕೇತಯ್ಯ ಜಯಂತಿ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕೇತೇಶ್ವರರ ಭಾವಚಿತ್ರದ ಭವ್ಯ ಮೆರವಣಿಗೆ ನಡೆಯಿತು. ಕರಡಿ ಮಜಲು, ಕುಂಭಹೊತ್ತ ಮಹಿಳೆಯರು ಹಾಗೂ ಸಮಾಜದ ಗಣ್ಯರು ಈ ಮೆರವಣಿಗೆಯಲ್ಲಿ ಇದ್ದರು.

# ಎಫ್ಆರ್‌ಪಿ ಹೆಚ್ಚಳಕ್ಕೆ ರೈತರ ಚಳವಳಿ: ಡಿ.12 ಬೆಳಗಾವಿ ಚಲೋ

**ಬಾಗಲಕೋಟೆ :** ಕೃಷಿ ಪರ ಹೋರಾಟದಲ್ಲಿ ನಿರತರಾಗಿರುವ ಕರ್ನಾಟಕ ಕಬ್ಬು ಬೆಳೆಗಾರರ ಸಂಘವು ಬೆಳಗಾವಿ ಅಧಿವೇಶನದ ಸಂದರ್ಭದಲ್ಲಿ ಬೆಳಗಾವಿ ಸುವರ್ಣಸೌಧ ಛಲೋ ಹೋರಾಟವನ್ನು ಡಿಸೆಂಬರ್ 12ರಂದು ಆಯೋಜಿಸಿದೆ ಎಂದು ಸಂಘದ ಅಧ್ಯಕ್ಷ ಜಿ. ನಾಗರಾಜ ಅವರು ತಿಳಿಸಿದ್ದಾರೆ.

ಶುಕ್ರವಾರ ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹರಿಯಾಣ ಮತ್ತು ಪಂಜಾಬ್ ಮಾದರಿಯಲ್ಲಿ ಎಫ್ಆರ್ಪಿ (ಈಖಿಕ) ಬೆಲೆ ಜೊತೆಗೆ ರಾಜ್ಯ ಸರ್ಕಾರವು ಪ್ರತಿಟನ್ಗೆ ?900 ಎಸ್ಎಪಿ (ಖಂಕ) ನಿಗದಿಪಡಿಸಿದೆ. ಅದೇ ರೀತಿ ನಮ್ಮ ರಾಜ್ಯ ಸರ್ಕಾರವು ಕನಿಷ್ಠ 500 ರೂ. ಎಸ್ಎಪಿ ನಿಗದಿಪಡಿಸಬೇಕೆಂದು ಒತ್ತಾಯಿಸಿ ಇವು ರೈತರ ಹಿತಕ್ಕಾಗಿ ಬಹಳ ಮುಖ್ಯವೆಂದು ಅವರು ಅಭಿಪ್ರಾಯಪಟ್ಟರು.



ಸಕ್ಕರೆ ಕಾರ್ಖಾನೆಗಳು ನಿಷೇಧಿತ ರೀತಿಯಲ್ಲಿ ಕಟಾವು ಮತ್ತು ಸಾಧನೆ ವೆಚ್ಚಗಳನ್ನು ಹೆಚ್ಚಿಸಿ ರೈತರಿಗೆ ನಷ್ಟ ಮಾಡುತ್ತಿದ್ದು, ಈ ಹೆಚ್ಚುವರಿ ಹಣವನ್ನು ರೈತರ ಬ್ಯಾಂಕ್ ಖಾತೆಗಳಿಗೆ ತಕ್ಷಣ ಜಮಾ ಮಾಡಬೇಕು ಎಂದು ಅವರು ಆಗ್ರಹಿಸಿದರು. ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ನಿಯಮಕ್ಕೆ ವಿರುದ್ಧವಾಗಿ ಹೆಚ್ಚುವರಿ ಪಡೆದಿರುವಬಾಗಲಕೋಟೆ, ಹಳಿಯಾಳ, ರಾಮದುರ್ಗ ಸೇರಿದಂತೆ ವಿವಿಧ ಸಕ್ಕರೆ ಕಾರ್ಖಾನೆಗಳಿಂದ ಕಟಾವು ಮತ್ತು ಸಾಗಾಣಿಕೆ ವೆಚ್ಚದ ಹೆಸರಿನಲ್ಲಿ ಹೆಚ್ಚುವರಿ ಹಣ ಪಡೆದಿರುವುದನ್ನು ರೈತ–ರಿಗೆ ಮರುಪಾವತಿ ಮಾಡಿಸಲು ಹಾಗೂ ಈ ಕುರಿತಾದ ಕ್ರಿಮಿನಲ್ ಕೇಸ್ ದಾಖಲಿಸಲು ಸರಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಅಲ್ಲದೆ, ಸಕ್ಕರೆ ಕಾರ್ಖಾನೆಗಳ ಲಾಭದ ಆದಾಯದ ಹಂಚಿಕೆಯ ಪ್ರಕಾರ, ರೈತರಿಗೆ ಬಾಕಿ ಇರುವ ಹಣವನ್ನು ಕೂಡಾ ಮರುಪಾವತಿ ಮಾಡಬೇಕೆಂದು ಅವರು ಆಗ್ರಹಿಸಿದರು.

ಕಳೆದ ಹತ್ತು ವರ್ಷಗಳಲ್ಲಿ ಕಾರ್ಖಾನೆಗಳು ಗಳಿಸಿರುವ ಲಾಭದ ಪರಿಶೀಲನೆ ನಡೆಸಿ, ಅದರ ಆಧಾರದ ಮೇಲೆ ರೈತರಿಗೆ ಹಣವನ್ನು ನೀಡಲು ಸಮಗ್ರ ತನಿಖೆ ನಡೆಸುವ ಅಗತ್ಯವಿದೆ ಎಂದು ಹೇಳಿದರು.

# ಸಂಭ್ರಮದ ಅಡ್ಡಪಲ್ಲಕ್ಕಿ ಮಹೋತ್ಸವ

**ಗುಳೇದಗುಡ್ಡ :** ಸಮೀಪದ ಹಾನಾಪೂರ ಎಸ್.ಪಿ.ಗ್ರಾಮದ ಶ್ರೀಜಗದ್ಗುರು ಪೂರ್ಣಾನಂದ ಮಹಾಮುನಿಗಳ ಆಶ್ರಮದಲ್ಲಿ ವಿಶ್ವಶಾಂತಿಗಾಗಿ ನಡೆದ ಕೋಟಿ ಜಪಯಜ್ಞ ಕಾರ್ಯಕ್ರಮ ಹಾಗೂ ಶ್ರೀಗಳವರ ಭಾವಚಿತ್ರದ ಹಾಗೂ ಅಡ್ಡಪಲ್ಲಕ್ಕಿ ಮಹೋತ್ಸವ, ಕುಂಭಮೇಳ ಕಾರ್ಯಕ್ರಮ ಗ್ರಾಮದಲ್ಲಿ ಬಹಳಷ್ಟು ಸಡಗರ, ಸಂಭ್ರಮದಿಂದ ನಡೆಯಿತು.

ಗ್ರಾಮದ ಶ್ರೀ ಶ್ರದ್ಧಾನಂದ ಮಠದಿಂದ ಹೊರಟ ಅಡ್ಡಪಲ್ಲಕ್ಕಿ ಮಹೋತ್ಸವ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚ–ರಿಸಿತು. ಹಾನಾಪೂರ ಎಸ್.ಪಿ.ಗ್ರಾಮದಲ್ಲಿ ವಿಶ್ವಶಾಂತಿಗಾಗಿ 15ನೇ ವರ್ಷದ ಕೋಟಿ ಜಪಯಜ್ಞ ಕಾರ್ಯಕ್ರಮ ಕುಡಾ ಬಹಳಷ್ಟು ಸಂಭ್ರಮದಿಂದ ಜರುಗಿತು.



ಈ ಸಂಭ್ರಮದ ಅಡ್ಡಪಲ್ಲಕ್ಕಿ ಮಹೋತ್ಸವ ಮೆರವಣಿಗೆಯಲ್ಲಿ ಎತ್ತು ಕುಣಿತ, ಭಜನೆ, ಡೊಳ್ಳು ಸೇರಿದಂತೆ ವಿವಿಧ ಜಾನಪದ ವಾದ್ಯ ಮೇಳಗಳು ಮತ್ತು ಮಹಿಳೆಯರಿಂದ ಕುಂಭ ಮೇಳದ ಅದ್ದೂರಿ ಮೆರವಣಿಗೆ ನಡೆಯಿತು.

ಕಾರ್ಯಕ್ರಮದಲ್ಲಿ ಹಾನಾಪೂರ ಗ್ರಾಮ ಪಂಚಾಯತಿ ಅಧ್ಯಕ್ಷ ಜಗದೀಶ ಹಿರೇಗೌಡರ, ಉಪಾಧ್ಯಕ್ಷೆ ಸಂಗೀತಾ ಪಮ್ಮಾರ, ಕ–ರಿಯವ್ವ ಮಾದರ, ಪುಂಡಲಿಕ ನಾಯಕ, ಸೋಮು ರಾಠೋಡ, ಅಯ್ಯಪ್ಪ ಹೂಗಾರ, ಬಸಪ್ಪ ಗೌಡರ, ಯಮನಪ್ಪ ಹಿರೇಗೌಡರ, ಗಿರಿಯಪ್ಪ ಪಮ್ಮಾರ, ಭೀರಪ್ಪ ಪಮ್ಮಾರ, ದೇವಪ್ಪ ನಾಯಕ, ವೈ.ಬಿ.ಗೌಡರ, ಗಣಪತಿ ನೆಲ್ಲೂರ, ಶಿವಪ್ಪ ಹಿರೇಗೌಡರ, ಯಮನಪ್ಪ ಬಾಲನ್ನವರ, ಪಾಂಡಪ್ಪ ರಾಠೋಡ, ರಾಮಪ್ಪ ಪಮ್ಮಾರ, ಗೋಪಾಲ ರಾಠೋಡ, ರಂಗಪ್ಪ ಮೂಲಿನಮನಿ, ಈರಣ್ಣಾ ಜೂಜಾ, ಹನಮಂತ ಮೂಲಿಮನಿ ಹಾಗೂ ಗ್ರಾಮದ ಇನ್ನೂ ಅನೇಕ ಗುರು ಹಿರಿಯರು ಕಾರ್ಯಕ್ರಮದಲ್ಲಿ ಇದ್ದರು.

# ಮಕ್ಕಳ ಆರೋಗ್ಯಕ್ಕೆ ಆದ್ಯತೆ ಅಗತ್ಯ: ಡಾ. ವೀರಣ್ಣ ಚರಂತಿಮಠ

**ಬಾಗಲಕೋಟೆ :** ನಗರದ ಬಿ.ವಿ.ವಿ.ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಕುಮಾರೇಶ್ವರ ಆಸ್ಪತ್ರೆಯ ಚಿಕ್ಕಮಕ್ಕಳ ವಿಭಾಗದಲ್ಲಿ ನವೆಂಬರ್ 14 ರಂದು ಮಕ್ಕಳ ದಿನಾಚರಣೆಯನ್ನು ಕೇಕ್ ಕತ್ತರಿಸಿ ಆಚರಿಸಲಾಯಿತು.

ಮಕ್ಕಳ ದಿನಾಚರಣೆ ನಿಮಿತ್ಯ ಕುಮಾರೇಶ್ವರ ಆಸ್ಪತ್ರೆಯಲ್ಲಿ ಚಿಕಿತ್ಸೆಗೆಂದು ದಾಖಲಾಗಿರುವ ಮಕ್ಕಳಿಗೆ ಹಣ್ಣು ಮತ್ತು ಸಿಹಿ ವಿತರಿಸಿ ಮಾತನಾಡಿದ ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರು 'ಇಂದಿನ ಮಕ್ಕಳೆ ನಾಳಿನ ನಾಗ–ರಿಕರು.

ರಾಷ್ಟ್ರದ ಭವಿಷ್ಯ ಮಕ್ಕಳ ಉಜ್ವಲ ಭವಿಷ್ಯವನ್ನು ಅವಲಂಬಿಸಿದೆ. ಪರಿಣಾಮವಾಗಿ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣದ ಜೊತೆಗೆ ಅವರ ಆರೋಗ್ಯಕ್ಕೂ ಆದ್ಯತೆ ನೀಡಬೇಕಾಗಿದೆ.ಕುಮಾರೇಶ್ವರಆಸ್ಪತ್ರೆಯಲ್ಲಿಚಿಕ್ಕಮಕ್ಕಳ ಚಿಕಿತ್ಸೆಗಾಗಿ ಅತ್ಯುತ್ತಮ ವಿಭಾಗವನ್ನು ಸ್ಥಾಪಿಸಲಾಗಿದೆ. ಈ ಮಕ್ಕಳ ವಿಭಾಗವು ಮಕ್ಕಳಸ್ನೇಹಿ ವಿಭಾಗವಾಗಿದ್ದು ವೈದ್ಯರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಮಕ್ಕಳ ಚಿಕಿತ್ಸೆಗಾಗಿ ಸುಸಜ್ಜಿತ ಎನ್.ಆಯ್.ಸಿ.ಯು, ಪಿ.ಆಯ್.ಸಿ.ಯು, ಕಾಕ್ಲಿಯರ್ ಇಂಪ್ಲಾ ್ಯಂಟ್ ಮತ್ತು ಉಚಿತ ಲಸಿಕೆ ಸೌಲಭ್ಯಗಳನ್ನು ಒದಗಿಸಲಾಗಿದೆ' ಎಂದರು. ಆರಂಭದಲ್ಲಿ ಮಕ್ಕಳು ಹೂಗುಚ್ಚ ನೀಡಿ ಮಾನ್ಯ ಕಾರ್ಯಾಧ್ಯಕ್ಷರನ್ನು ಸ್ವಾಗತಿಸಿದರು. ಈ ಸಂದರ್ಭ ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ಮೆಡಿಕಲ್ ಕಾಲೇಜ್ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಚಿಕ್ಕಮಕ್ಕಳ ವಿಭಾಗದ ವೈದ್ಯರಾದ ಡಾ.ಅಶೋಕ ಬಡಕಲಿ, ಡಾ.ರಮೇಶ ಪೋಳ, ಡಾ.ವಿನಯ ಕುಮಾರ, ಡಾ.ಕೆಲುಡೆಪ್ಪಾ ತಳವಾರ, ಡಾ.ಗಂಗಾಧರ ಮಿರ್ಜಿ, ಡಾ.ಪಲ್ಲವಿ ಚರಂತಿಮಠ ಹಾಗೂ ಸಿಬ್ಬಂದಿ ಮತ್ತು ಮಕ್ಕಳ ಪಾಲಕರು ಉಪಸ್ಥಿತ–ರಿದ್ದರು.

# ವಿಕ್ರಮ್ ಕುಮತಾರ ಕಿರುಚಿತ್ರಗಳ ಸರಣಿ ಆರಂಭ

**ಹುಬ್ಬಳ್ಳಿ :** ಕಿರುಚಿತ್ರಗಳ ಮೂಲಕ ಸದಾಕಾಲ ಹೊಸತನ್ನು ಕೊಡುವ ತುಡಿತವಿರುವ ಮೂಲತ: ಗದಗ–ಬೆಟಗೇರಿಯವರಾದ ವಿಕ್ರಮ್ ಕುಮತಾ ಇದೀಗ ಕಿರುಚಿತ್ರಗಳ ಸರಣಿ ಆರಂಭಿಸಿದ್ದಾರೆ.

ಎಸ್ ಬಿಟ್ಜ್ ಹುಬ್ಬಿ ಚಾನೆಲ್ ಮೂಲಕ ಒಂದೊಂದು ಹೊಸ ವಿಷಯಗಳ ಮೂಲಕ ಜನರಲ್ಲಿ ಸಾಮಾಜಿಕ ಕಳಕಳಿಯ ಜೊತೆಗೆ , ಹಾಸ್ಯಪ್ರಜ್ಞೆಯನ್ನು ಬಿಂಬಿಸುವ, ಜನಜಾಗೃತಿಯನ್ನು ಒಳಗೊಂಡಂತೆ ಪ್ರಸ್ತುತ ವಿಷಯಗಳನ್ನು ವೀಕ್ಷಕರಿಗೆ ತಿಳಿಸಿಕೊಡುವಲ್ಲಿ ತಮ್ಮದೇ ತಂಡದ ಮೂಲಕ ಯಶಸ್ವಿಯಾಗಿದ್ದಾರೆ. ಈ ಕಿರುಚಿತ್ರಗಳ ಸರಣಿಗಳಲ್ಲಿ ಪ್ರತಿಭಾನ್ವಿತ ಯುವ ಕಲಾವಿದರಿಗೆ ವೇದಿಕೆ ನೀಡಲಾಗಿದ್ದು ಹುಬ್ಬಳ್ಳಿ–ಧಾರವಾಡಗಳಲ್ಲಿ ಮತ್ತು ಸುತ್ತಮುತ್ತ ಗ್ರಾಮೀಣ ಭಾಗಗಳಲ್ಲಿ ಚಿತ್ರೀಕರಣ ನಡೆಸಲಾಗಿದೆ . ಕಲಾವಿದರಾಗಿ ವಿಕ್ರಮ್ ಕುಮತಾ, ಭಾವನಾ ಶಿಂಧೆ, ರೇಖಾ ಹೊನವಾಡ, ಟಿ.ಜೆ.ಭಾಂಡಗೆ, ಸಂತೋಷ ಜಾಧವ, ಕಿರಣ ಸಿದ್ದಾಪೂರ, ವೀರನಗೌಡ ಸಿದ್ದಾಪೂರ, ಪೂಜಾ ಪಾಟೀಲ, ವೀಣಾ ಮಠ, ಲಲಿತಾ ಬೆಟಗೇರಿ, ಕೆ.ಪಿ.ಶೇಖರ, ಮಹಾಂತೇಶ ಹಿರೇಮಠ, ರಮೇಶ ಕಲಾದಗಿ, ಪ್ರೀತಮ್ ಶಿಂಧೆ, ಶುಷ್ಮಾ ಕರಾಲೆ, ಅನ್ನಪೂರ್ಣ ಯಾದವಾಡ, ನಿಖಿಲ್ ಗೊಂಧಳೆ, ರಮೇಶ ಜಾಧವ ಮೊದಲಾದವರು ಅಭಿನಯಿಸಿದ್ದಾರೆ.



ತಾಂತ್ರಿಕ ವರ್ಗದಲ್ಲಿ ಕಥೆ– ಚಿತ್ರಕಥೆ ವಿಕ್ರಮ್ ಕುಮತಾ, ಭಾವನಾ ಶಿಂಧೆ, ರೇಖಾ ಹೊನವಾಡ , ಪಿಆರ್ ಓ ಡಾ.ಪ್ರಭು ಗಂಜಿಹಾಳ,ಡಾ.ವೀರೇಶ ಹಂಡಿಗಿ, ಸಹ ನಿರ್ದೇಶನ ಭಾವನಾ ಶಿಂಧೆ, ಸಂಕಲನ ಮತ್ತು ಛಾಯಾಗ್ರಹಣ ನಿರ್ದೇಶನದ ಹೊಣೆಯನ್ನು ವಿಕ್ರಮ್ ಕುಮತಾ ಹೊತ್ತಿದ್ದಾರೆ. ಕಿರುಚಿತ್ರಗಳನ್ನು ಎಸ್ ಬಿಟ್ಜ್ ಹುಬ್ಬಿ ಯುಟ್ಯೂಬ್ ಚಾನೆಲ್ ನಲ್ಲಿ ವೀಕ್ಷಿಸಿ ಪ್ರೋತ್ಸಾಹಿಸುವಂತೆ ನಿರ್ದೇಶಕ ವಿಕ್ರಮ್ ಕುಮತಾ ಕೋರಿದ್ದಾರೆ.

**ವರದಿ: ಡಾ.ಪ್ರಭು ಗಂಜಿಹಾಳ**

# ಶಿವಯೋಗಮಂದಿರ ಸಂಸ್ಥೆಯ ಕೊಡುಗೆ ಅನನ್ಯ, ಅನುಕರಣೀಯ: ಡಾ. ಗುರುಸಿದ್ದರಾಜಯೋಗೇಂದ್ರ ಮಹಾಸ್ವಾಮಿಗಳು



**ಬಾದಾಮಿ :** ಶ್ರೀ ಸದಾಶಿವ ಶ್ರೀಗಳು ಸಂಸ್ಥೆಯ ಸಂಚಾಲಕರಾಗಿ, ವಟುಸಾಧಕರಿಗೆ ಮಾತೃವಾತ್ಸಲ್ಯ ತೋರಿ ವಿದ್ಯಾಸಂಸ್ಕಾರ ನೀಡಿದ ಲಿಂಗೈಕ್ಯ ಶ್ರೀ ಹಾನಗಲ್ಲ ಸದಾಶಿವ ಶಿವಯೋಗಿಗಳು ತಮ್ಮ ಗುರುವರ್ಯರ ಮನೋಇಂಗಿತ ಅರಿತು, ಮಂದಿರದ ವಟು ಸಾಧಕರನ್ನು ಸಮಾಜ ಹಾಗೂ ಧರ್ಮಮುಖಿ ಮಠಾಧೀಶರನ್ನಾಗಿ ಮಾಡಲು, ಅವರಲ್ಲಿ ವಿದ್ಯಾ ಸಂಸ್ಕಾರ ಹಾಗೂ ಸಂಸ್ಕೃತಿ ರೂಪಿಸಲು ತಮ್ಮ ಬದುಕನ್ನು ಶ್ರೀಗಂಧದಂತೆ ತೇಯ್ದರು ಎಂದು ಶಿವಯೋಗಮಂದಿರ ಸಂಸ್ಥೆಯ ಅಧ್ಯಕ್ಷ ಶ್ರೀ ಮಹನ್ಮಹಾರಾಜ ನಿರಂಜನ ಜಗದ್ಗುರು ಡಾ.ಗುರುಸಿದ್ದರಾಜಯೋಗೇಂದ್ರ ಮಹಾಸ್ವಾಮಿಗಳು ಹೇಳಿದರು

ಅವರು ಗುರುವಾರ ಸಮೀಪದ ಶಿವಯೋಗಮಂದಿರದಲ್ಲಿ ಶ್ರೀ ಮದ್ವೀರಶೈವ ಶಿವಯೋಗಮಂದಿರದ ಶಿವಯೋಗಸಿರಿ, ತಪೋಧನರಾದ ಶ್ರೀ ಸದಾಶಿವ ಶ್ರೀಗಳ 41 ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ನಾಡಿನ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಮಾಜಸೇವಾ ಕ್ಷೇತ್ರಗಳಿಗೆ ಶ್ರೀ ಮದ್ವೀರಶೈವ ಶಿವಯೋಗಮಂದಿರ ಸಂಸ್ಥೆಯ ಕೊಡುಗೆ ಅನನ್ಯ ಹಾಗೂ ಅನುಕರಣೀಯವಾದದು. ಇಂತಹ ಸಂಸ್ಥೆಯನ್ನು ಸ್ಥಾಪಿಸಿದ ಲಿಂಗೈಕ್ಯ ಶ್ರೀ ಹಾನಗಲ್ಲ ಕುಮಾರ ಶಿವಯೋಗಿಗಳು ಸದಾ ಸ್ಮರಣೀಯರು ಎಂದರು

ಕಾರ್ಯಕ್ರಮವನ್ನು ಉದ್ದೇಶಿಸಿ ಹಂದಿಗುಂದದ ಶ್ರೀಗಳು, ಶಿರಹಟ್ಟಿಯ ಫಕೀರೇಶ್ವರಮಠದ ದಿಂಗಾಲೇಶ್ವರ ಶ್ರೀಗಳು, ಶಾಸಕ ಭೀಮಸೇನ ಚಿಮ್ಮನಕಟ್ಟಿ ಮಾತನಾಡಿದರು. ವೇದಿಕೆಯ ಮೇಲೆ ಸಂಸ್ಥೆಯ ಉಪಾಧ್ಯಕ್ಷ ಸದಾಶಿವ ಶ್ರೀ, ಕಾಶಿನಾಥ ಶ್ರೀ, ತೋರಗಲ್ ಗಚ್ಚಿನಮಠದ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀ, ನವಲಗುಂದ ಗವಿಮಠದ ಬಸವಲಿಂಗ ಮಹಾಸ್ವಾಮಿಗಳು, ಹೊಸೂರು ಜಿಗೇರಿಮಠದ ಗುರುಸಿದ್ದ ಶಿವಾಚಾರ್ಯ ಶ್ರೀ, ಮಾಜಿ ಶಾಸಕ ಎಂ.ಕೆ.ಪಟ್ಟಣಶೆಟ್ಟಿ, ರಾಜಶೇಖರ ಶೀಲವಂತರ, ಪಿಕಾರ್ಡ ಬ್ಯಾಂಕ್ ಅಧ್ಯಕ್ಷ ಮಹಾಂತೇಶ ಮಮದಾಪೂರ, ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಕುಮಾರಗೌಡ ಜನಾಲಿ, ಎ.ಸಿ.ಪಟ್ಟಣದ, ಪಂಪಣ್ಣ ಕಾಚೆಟ್ಟಿ, ಡಾ.ಆರ್.ಸಿ.ಭಂಡಾರಿ, ಮುಕ್ಕಣ್ಣ ಜನಾಲಿ, ಇಷ್ಟಲಿಂಗ ಶಿರಶಿ, ಬಿ.ವಿ.ಭಂಡಾರಿ, ಶರಣಗೌಡ ಪಾಟೀಲ, ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಭಕ್ತರು, ಭಾಗವಹಿಸಿದ್ದರು. ಶಿವಯೋಗಮಂದಿರದ ಧರ್ಮದರ್ಶಿ ಎಂ.ಬಿ.ಹಂಗರಗಿ ಸ್ವಾಗತಿಸಿದರು.

# ಡಿಸೆಂಬರ್ 14ರಂದು ರಾಷ್ಟ್ರೀಯ ಲೋಕ ಅದಾಲತ್




**ವಿಜಯಪುರ :** ಜಿಲ್ಲಾ ಕೇಂದ್ರ ಸೇರಿದಂತೆ ಜಿಲ್ಲೆಯಾದ್ಯಂತ ಇರುವ ಎಲ್ಲ ಅಧೀನ ನ್ಯಾಯಾಲಯಗಳಲ್ಲಿ ಡಿಸೆಂಬರ್ 14ರಂದು ರಾಷ್ಟ್ರೀಯ ಲೋಕ್ ಅದಾಲತ್ ಆಯೋಜಿಸಲಾಗಿದ್ದು, ಈ ಅದಾಲತನಲ್ಲಿ ಕಕ್ಷಿದಾರರು ಭಾಗವಹಿಸಿ, ರಾಜಿ ಸಂಧಾನದ ಮೂಲಕ ಪ್ರಕರಣ ಇತ್ಯರ್ಥಕ್ಕೆ ಅವಕಾಶವಿರುವುದರಿಂದ ಈ ಅದಾಲತ್ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಶಿವಾಜಿ ಅನಂತ ನಲವಾಡೆ ಅವರು ತಿಳಿಸಿದರು.

ಶುಕ್ರವಾರ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣಎಡಿಆರ್‌ಕಟ್ಟಡದಲ್ಲಿಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿದ ಅವರು, ಲೋಕ್ ಅದಾಲತ್ ಕಾರ್ಯಕ್ರಮದಲ್ಲಿ ರಾಜಿಗೆ ಒಳಪಡಬಹುದಾದ ಎಲ್ಲಾ ಕ್ರಿಮಿನಲ್ ಪ್ರಕರಣಗಳನ್ನು, ಚೆಕ್ ಬೌನ್ಸ್ ಪ್ರಕರಣಗಳು, ಮೋಟಾರು ವಾಹನ ಅಪಘಾತದಲ್ಲಿ ಪರಿಹಾರ ಕೋರಿ ಸಲ್ಲಿಸಿರುವ ಪ್ರಕರಣಗಳು, ವಿಚ್ಛೇದನವನ್ನು ಹೊರತುಪಡಿಸಿ ಇರುವ ಕೌಟುಂಬಿಕ ವ್ಯಾಜ್ಯಗಳು, ಆಸ್ತಿಯಲ್ಲಿ ವಿಭಾಗ ಕೋರಿರುವದಾವೆಗಳುಹಾಗೂದೂರವಾಣಿ ಬಾಕಿಬಿಲ್ಲುಗಳಪಾವತಿಪ್ರಕರಣಗಳು,ನೀರಿನ ಬಿಲ್ ಪಾವತಿ ಪ್ರಕರಣಗಳು, ಜೀವನಾಂಶ ಕೋರಿರುವ ಪ್ರಕರಣಗಳು, ಕಾರ್ಮಿಕ ವ್ಯಾಜ್ಯಗಳು, ಭೂ-ಸ್ವಾಧೀನ ಪ್ರಕರಣಗಳು, ಕಂದಾಯ ಪ್ರಕರಣಗಳು, ಸಾಲ ವಸೂಲಾತಿ ಪ್ರಕರಣಗಳು, ಬ್ಯಾಂಕ್ ವ್ಯಾಜ್ಯಗಳು ಹಾಗೂ ಇತರೆ ಸಿವಿಲ್ ಪ್ರಕರಣಗಳನ್ನು ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದರು.

ಜಿಲ್ಲೆಯಲ್ಲಿ ಡಿಸೆಂಬರ್ 14 ರಂದು ಜರುಗುವ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಕಕ್ಷಿದಾರರು ತಮ್ಮ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಂಡು ನೆಮ್ಮದಿಯ ಜೀವನಕ್ಕೆ ನಾಂದಿ ಹಾಡಲು ಸುವರ್ಣಾವಕಾಶ ಕಲ್ಪಿಸಿದ್ದು,

ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ಹೇಳಿದರು. ಈ ವೇಳೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನುನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಅರವಿಂದ. ಎಸ್. ಹಾಗರಗಿ, ಜಿಲ್ಲಾ ನ್ಯಾಯಾವಾದಿಗಳ ಸಂಘದ ಅಧ್ಯಕ್ಷರಾದ ಡಿ.ಜಿ. ಬಿರಾದಾರ, ಜಿಲ್ಲಾ ನ್ಯಾಯಾವಾದಿಗಳ ಸಂಘದ ಕಾರ್ಯದರ್ಶಿಗಳಾದ ಎಸ್.ಎಸ್. ಚೂರಿ ಉಪಸ್ಥಿತರಿದ್ದರು.

# ಯುವ ಜನಾಂಗಕ್ಕೆ ಕನಕದಾಸರ ಚಿಂತನೆ ಬಾಳಿಗೆ ದಾರಿ ದೀಪ: ಶಾಸಕ ಭೀಮಸೇನ ಚಿಮ್ಮನಕಟ್ಟಿ




**ಬಾದಾಮಿ :** ಭಕ್ತ ಕನಕದಾಸರ ಚಿಂತನೆ, ಆದರ್ಶಗಳನ್ನು ಇಂದಿನ ಯುವಜನಾಂಗ ಸೇರಿದಂತೆ ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಪಟ್ಟಣದ ಶ್ರೀ ಬೀರಲಿಂಗೇಶ್ವರ ಸಮುದಾಯ ಭವನದಲ್ಲಿ ಕನಕ ಜಯಂತಿ ನಿಮಿತ್ಯ ಹಮ್ಮಿಕೊಂಡಿದ್ದ ಕನಕ ಪಂಚಮಿ ಐದು ದಿನಗಳ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಶಾಸಕ ಭೀಮಸೇನ ಚಿಮ್ಮನಕಟ್ಟಿ ಮಾತನಾಡಿ ಕನಕದಾಸರು ದಾರ್ಶನಿಕರು, ಸಮಸಮಾಜದ ಕಲ್ಪನೆ ಹೊಂದಿದ್ದವರಾಗಿದ್ದರು ಅವರು ನಡೆದ ಬಂದ ದಾರಿಯಲ್ಲಿ ನಾವೆಲ್ಲರೂ ನಡೆಯೋಣ ಜೀವನ ಪಾವಣಗೊಳಿಸೋಣ ಎಂದರು.

ಶಿರೂರಿನ ಕನಕ ಬ್ರಹ್ಮ ವಿದ್ಯಾಶ್ರಮದ ಚಿನ್ಮಯಾನಂದ ಶ್ರೀ ಮಾತನಾಡಿ ಯಾವುದೇ ವ್ಯಕ್ತಿ ಬೆಳೆಯಲು ದೈವ ಮತ್ತು ದೇವರ ಆಶೀರ್ವಾದ ಮುಖ್ಯ ಎಂದು ಹೇಳಿದರು.

ಮಾಜಿ ಸಚಿವ ಬಾಲಪ್ಪ ಭೀಮಪ್ಪ ಚಿಮ್ಮನಕಟ್ಟಿ, ಪುರಸಭೆ ಸದಸ್ಯ ಮಂಜುನಾಥ ಹೊಸಮನಿ, ಮುಖಂಡ ಕೆ.ಬಿ.ಗೌಡರ, ಹನಮಂತ ಅಪ್ಪನ್ನವರ, ಉಲ್ಲಾಸ ಬಸರಿ, ಜೋಗಿನ ಸೇರಿದಂತೆ ಕುರುಬ ಸಮಾಜದ ಮುಖಂಡರು ಯುವಕರು, ಮಹಿಳೆಯರು ಹಾಜರಿದ್ದರು.



# ಮಕ್ಕಳ ದಿನಾಚರಣೆ

**ಬಾದಾಮಿ :** ನಗರದ ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಗುರುವಾರ ಜವಹಾರಲಾಲ್ ನೆಹರು ಜಯಂತಿ ಅಂಗವಾಗಿ ಮಕ್ಕಳ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯಶಿಕ್ಷಕಿ ತೃಪ್ತಿ ಕಲಾದಗಿ ಸೇರಿದಂತೆ ಅಂಗ ಸಂಸ್ಥೆಯ ಮುಖ್ಯಸ್ಥರು, ಸಹಶಿಕ್ಷಕರು, ಸಿಬ್ಬಂದಿಗಳು ಹಾಜರಿದ್ದರು. ಮಕ್ಕಳಿಗೆ ಸಿಹಿ ವಿತರಿಸಲಾಯಿತು. ಮಕ್ಕಳಿಗೆ ಕ್ರೀಡೆಗಳನ್ನು ಆಯೋಜಿಸಿ ಮನರಂಜಿಸಲಾಯಿತು.

# ರಾನಡೆ ಸಂಸ್ಥೆಗೆ ವಿದ್ಯಾರ್ಥಿಗಳಿಗೆ ರಾಷ್ಟ್ರಮಟ್ಟದ ಪ್ರಶಸ್ತಿ

**ಜಮಖಂಡಿ :** ಗದಗದ ಸಾಂಸ್ಕೃತಿಕ ವೇದಿಕೆ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರಮಟ್ಟದ ಬಣ್ಣದಮನೆ ಮಕ್ಕಳ ಚಿತ್ರಕಲಾ ಸ್ಪರ್ಧೆಯಲ್ಲಿ ನಗರದ ಶ್ರೀ ಗುರುದೇವ ರಾನಡೆ ಶಿಕ್ಷಣ ಸಂಸ್ಥೆ ವಿದ್ಯಾಭವನ ಆಂಗ್ಲ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢ ಶಾಲೆ ವಿದ್ಯಾರ್ಥಿಗಳಾದ ಮಧುಶ್ರೀ ಮೆಂಡಿಗೇರಿ ಹಾಗೂ ಶಿವನಗೌಡ ಪಾಟೀಲ ಪ್ರಶಸ್ತಿ ಪಡೆದುಕೊಂಡಿದ್ದಾರೆ.

ಸನ್ 2023-24ನೇ ಸಾಲಿನ ಚಿಣ್ಣರ ಚಿತ್ತಾರ ಸರ್ಟಿಫಿಕೆಟ್ ಅವಾರ್ಡ್ ಪಡೆದುಕೊಂಡಿರುವ ಇಬ್ಬರು ವಿದ್ಯಾರ್ಥಿಗಳಿಗೆ ಸಂಸ್ಥೆ ಕಾರ್ಯದರ್ಶಿ ಪ್ರಸಾದ ಆಪ್ಟೆ, ಸಹಕಾರ್ಯದರ್ಶಿ ಶ್ರೀನಿವಾಸ ಅಪರಂಜಿ, ಸದಸ್ಯರಾದ ಕುಲದೀಪಿಕಾ ಆಪ್ಟೆ, ಆಡಳಿತಾಧಿಕಾರಿ ರವಿ ಲಗಳಿ ಸಹಿತ ಹಲವರು ಅಭಿನಂದಿಸಿದ್ದಾರೆ.

# ದಾರ್ಶನಿಕ ಲೋಕದ ದೃವತಾರೆ



ದಾಸ ಸಾಹಿತ್ಯ ಮತ್ತು ಶರಣ ಸಾಹಿತ್ಯ ಕನ್ನಡ ಸಾಹಿತ್ಯದ ಎರಡು ಕಣ್ಣುಗಳಿಂದಂತೆ. ಹನ್ನೆರಡನೇ ಶತಮಾನದ ವಚನಕಾರರ ನಂತರ ತೀರಾ ಸರಳವಾಗಿ ಮತ್ತು ಜನಮುಖಿಯಾಗಿ ಸಾಹಿತ್ಯ ರಚನೆಯಾದುದು ದಾಸ ಸಾಹಿತ್ಯದ್ದು. 12ನೇ ಶತಮಾನದ ವಚನಕಾರರು ಶಿವಶರಣರಾದರೆ 16ನೇ ಶತಮಾನದ ದಾಸರು ಹರಿಭಕ್ತರು. ಶರಣರು ಮತ್ತು ದಾಸರು ಸಾಮಾಜಿಕ ಅಂಕುಡೊಂಕುಗಳನ್ನು, ಡಾಂಭಿಕತೆಯನ್ನು, ಮೌಢ್ಯತೆಯನ್ನು ತಮ್ಮ ಸಾಹಿತ್ಯದ ಮೂಲಕ ತೊಡೆದು ಹಾಕಲು ಪ್ರಯತ್ನಿಸಿದವರೇ. ಇಡೀ ದಾಸ ಸಾಹಿತ್ಯದಲ್ಲಿ ತಮ್ಮ ವಿಶಿಷ್ಟ ವ್ಯಕ್ತಿತ್ವ ಮತ್ತು ಸಾಹಿತ್ಯದಿಂದಾಗಿ ಜನಮನ ಸೆಳೆದವರು ಕನಕದಾಸರು.

ಕನಕದಾಸರು ಈಗಿನ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಕ್ರಿ.ಶ 1488ರಲ್ಲಿ ಬೀರಪ್ಪನಾಯಕ ಮತ್ತು ಬಚ್ಚಮ್ಮ ದಂಪತಿಗಳಿಗೆ ಮಗನಾಗಿ ಜನಿಸಿದರು. ಬಾಡ ಬಂಕಾಪುರವೆಂದು ಕರೆಯುತ್ತಿದ್ದ ಈ ಪ್ರದೇಶ ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು. ಬೀರಪ್ಪ ನಾಯಕ ವಿಜಯನಗರದ ಅರಸರ ದಂಡನಾಯಕನಾಗಿದ್ದ. ಯುದ್ಧಕಾಲದ ಸಂದರ್ಭಗಳಲ್ಲಿ ಬೀರಪ್ಪ ನಾಯಕ ತೋರುತ್ತಿದ್ದ ಪರಾಕ್ರಮ, ದಿಟ್ಟತನ, ನಾಯಕತ್ವ ಗುಣವನ್ನು ಕಣ್ಣಾರೆ ಕಂಡ ಅರಸ ಈತನಿಗೆ 78 ಗ್ರಾಮಗಳ ಮೇಲುಸ್ತುವಾರಿಯನ್ನು ವಹಿಸಿಕೊಟ್ಟ.

ಕಾಗಿನೆಲೆ ಬಚ್ಚಮ್ಮನ ತವರು ಮನೆ. ಬಡವರ ಒಡಲುರಿಗೆ ಎಡೆಬಿಡದೆ ಮಿಡಿಯುತ್ತಿದ್ದ ಬಚ್ಚಮ್ಮ ಊರಿನ ಎಲ್ಲರ ಗೌರವ ಪ್ರೀತಿಗೆ ಪಾತ್ರಳಾಗಿದ್ದಳು. ಬೀರಪ್ಪ ಮತ್ತು ಬಚ್ಚಮ್ಮ ದಂಪತಿಗಳು ತಮ್ಮ ಆರಾಧ್ಯ ದೈವ ತಿರುಪತಿ ತಿಮ್ಮಪ್ಪನಿಗೆ ಹರಕೆ ಹೊತ್ತು ಪಡೆದ ತಮ್ಮ ಮಗುವಿಗೆ ತಿಮ್ಮಪ್ಪನೆಂದು ನಾಮಕರಣ ಮಾಡಿದರು.

ಬೀರಪ್ಪನಾಯಕನಿಗೆ ತನ್ನ ಮಗನನ್ನು ವಿದ್ಯಾವಂತನಾಗಿ ಮಾಡಬೇಕೆಂಬ ಕನಸು. ಗೆಳೆಯ ಬಂಕಾಪುರದ ಶ್ರೀನಿವಾಸ ಆಚಾರ್ಯ ಅವರ ಬಳಿ ಮಗನನ್ನು ಸೇರಿಸಿದರು. ಶ್ರೀನಿವಾಸ ಆಚಾರ್ಯರು ತಿಮ್ಮಪ್ಪನಿಗೆ ಅರ್ಥಶಾಸ್ತ್ರ, ಧರ್ಮಶಾಸ್ತ್ರ, ತರ್ಕ, ಮೀಮಾಂಸೆ, ಛಂದಸ್ಸು, ವ್ಯಾಕರಣ ಕಲಿಸಿದರು. ಕಾವ್ಯ, ಪುರಾಣ, ಜನಪದ ಹೀಗೆ ನಾನಾ ಮೂಲಗಳಿಂದ ತಿಮ್ಮಪ್ಪ ಜ್ಞಾನದ ಹರಿವನ್ನು ಹೆಚ್ಚಿಸಿಕೊಂಡಿದ್ದ. ಹತ್ತಾರು ವರ್ಷಗಳ ಕಾಲ ಗುರುಕುಲದಲ್ಲಿದ್ದು ಜ್ಞಾನ ಸಂಪಾದನೆ ಮಾಡಿಕೊಂಡ ತನ್ನ ಮಗ ತನಗಿಂತ ದೊಡ್ಡ ಪಾಳೇಗಾರನಾಗಬೇಕೆಂಬುದು ಬೀರಪ್ಪನ ಆಸೆಯಾಗಿತ್ತು. ಕ್ಷತ್ರಿಯೋಚಿತ ವಿದ್ಯೆಗಳನ್ನು ಕರಗತ ಮಾಡಿಸಿದ. ಪರಿಶ್ರಮದಿಂದ ಎಲ್ಲಾ ವಿದ್ಯೆ ಪಡೆದು ಕಲಿಯಾಗಿ, ಸ್ಪುರದ್ರೂಪಿಯಾಗಿ ಗುರುತಿಸಿಕೊಳ್ಳತೊಡಗಿದ.

ವಯೋ ಸಹಜ ದಣಿವು ಮತ್ತು ಅನಾರೋಗ್ಯದಿಂದ ಬೀರಪ್ಪ ನಾಯಕ ಇಹಲೋಕ ತ್ಯಜಿಸಿದ. ತಿಮ್ಮಪ್ಪನಿಗೆ ತಂದೆಯೆ ಮೊದಲ ಗುರುವಾಗಿದ್ದ. ಬದುಕಿನಲ್ಲಿ ಮೊದಲ ಬಾರಿಗೆ ಒಬ್ಬಂಟಿಯಾದ ಅನುಭವವಾಯಿತು. ಇದೇ ಸಮಯ ಹೊಂಚು ಹಾಕುತ್ತಿದ್ದವರ ಹಾಗೆ ಬಾಡದ ಮೇಲೆ ವೈರಿ ಅರಸರು ಯುದ್ಧಕ್ಕೆ ಸನ್ನದ್ಧರಾಗಿದ್ದರು. ರಾಜಾ ಕೃಷ್ಣದೇವರಾಯ ಯುದ್ಧ ಘೋಷಿಸಿ ತಿಮ್ಮಪ್ಪನನ್ನು ಈ ಭಾಗದ ದಂಡನಾಯಕನನ್ನಾಗಿ ನೇಮಿಸಿದ. ಈಗ ತಿಮ್ಮಪ್ಪ ತಿಮ್ಮಪ್ಪ ನಾಯಕನಾದ. ಈತನ ನೇತೃತ್ವದಲ್ಲಿ ಸೈನಿಕರನ್ನು ಹುರಿದುಂಬಿಸಿದ. ವಿಜಯನಗರಕ್ಕೆ ಜಯ ಲಭಿಸಿತು. ಅರಸನಿಗೆ ಸಂತೋಷವಾಯಿತು.

ತಿಮ್ಮಪ್ಪ ನಾಯಕ ತಂದೆಯ ಜವಾಬ್ದಾರಿಯನ್ನು ಮುಂದುವರಿಸಿದ. ಬಾಡದಲ್ಲಿ ಶ್ರೀರಂಗನಾಥ ಸ್ವಾಮಿ ದೇವಾಲಯ ನಿರ್ಮಾಣಕ್ಕಾಗಿ ನೆಲ ಅಗೆಯಿಸುವಾಗ ದೊಡ್ಡ ದೊಡ್ಡ ಏಳು ಕೊಪ್ಪರಿಕೆಗಳು ದೊರೆತವು. ಅದರಲ್ಲಿ ಬಂಗಾರದ ನಾಣ್ಯಗಳು ಒಡವೆಗಳು ತುಂಬಿದ್ದವು. ಸಿಕ್ಕಿರುವ ಕೊಪ್ಪರಿಗೆ ಹೊನ್ನನ್ನು ಸ್ವಾರ್ಥಕ್ಕಾಗಿ ಬಳಸದೆ ಬಡಬಗ್ಗರಿಗೆ, ದೀನ ದಲಿತರಿಗೆ, ಕೆರೆಕಟ್ಟೆ ಕಟ್ಟುವುದಕ್ಕೆ,ದೇಗುಲ ನಿರ್ಮಾಣ ಮಾಡುವುದಕ್ಕೆ, ದೇವಾಲಯ ಜೀರ್ಣೋದ್ಧಾರಗಳಿಗೆ ಬಳಸಿದ. ಇದರಿಂದ ತಿಮ್ಮಪ್ಪ ನಾಯಕನ ವ್ಯಕ್ತಿತ್ವ ಉತ್ತುಂಗಕ್ಕೇರಿತು. ಬಾಡ ಬಂಕಾಪುರದ ಜನರಂತೂ ಬಂಗಾರದ ಹಂಗಿಲ್ಲದ ತಮ್ಮ ನಾಯಕನನ್ನು ಎದೆ ತುಂಬಿ ಕನಕ ನಾಯಕ ಎಂದು ಬಣ್ಣಿಸಿ ಕರೆಯತೊಡಗಿದರು.

ಒಮ್ಮೆ ವಿಜಯದಶಮಿ ಉತ್ಸವದಲ್ಲಿ ಶ್ರೀ ಕೃಷ್ಣದೇವರಾಯ ಕನಕನನ್ನು ಕರೆಯಿಸಿಕೊಂಡು ಅಸಂಖ್ಯಾತ ಸಾಮಂತರ ಎದುರು ಆತನಿಗೆ ಬಾಡ ಬಂಕಾಪುರ ನಾಡಿನ ಮಾಂಡಳಿಕ ಅಧಿಕಾರಿಯನ್ನಾಗಿ ನೇಮಿಸಿ, ಅದಕ್ಕೆ ತಕ್ಕ ಉಡುಪು, ರತ್ನ ಖಚಿತ ಖಡ್ಗವನ್ನು ನೀಡಿ ಕನಕ ನಾಯಕ ಎಂಬ ಜನತಾ ಬಿರುದನ್ನು ಅಧಿಕೃತಗೊಳಿಸಿದನು. ಕನಕ ನಾಯಕ ಜನಸೇವೆಯೇ ಜನಾರ್ದನನ ಸೇವೆ ಎಂದು ತಿಳಿದು ಕಾರ್ಯತತ್ಪರನಾಗಿ ಸುಖವಾಗಿರುವಾಗಲೇ ತಾಯಿಯ ನಿಧನದ ಸುದ್ದಿ ಸಿಡಿಲಂತೆ ಎರಗಿತು. ನಂತರ ಕರುಳಿನ ಕುಡಿ ಪ್ರೀತಿಯ ಪುತ್ರನ ಅಕಾಲ ಮರಣ. ಮಗನ ಸಾವು ಮಡದಿಯ ಮೇಲೆ ಘೋರ ಪರಿಣಾಮ ಬೀರಿ ಮನೋರೋಗದಿಂದ ಹಾಸಿಗೆ ಹಿಡಿದು ಮಡದಿ ಮರಣ ಹೊಂದಿದಳು. ತನ್ನವರನ್ನೆಲ್ಲ ಒಬ್ಬೊಬ್ಬರನ್ನಾಗಿ ಕಳೆದುಕೊಂಡ ಕನಕ ದುಃಖದಿಂದ ಮಂಕಾದ ಇದೇ ಸಂದರ್ಭದಲ್ಲಿ ಯುದ್ಧ ಎದುರಿಸುವ ಸಂದರ್ಭ ಬರುತ್ತದೆ. ಕನಕ ಹುಟ್ಟು ಕಲಿಯಾಗಿದ್ದ. ಯುದ್ಧಕ್ಕೆ ಸಿದ್ಧನಾದ ಆದರೆ ರಣೋತ್ಸಾಹ ಪ್ರೇರೇಪಿಸಲಿಲ್ಲ ವೈರಿ ಪಡೆಯ ವೀರನೊಬ್ಬ ಬೀಸಿದ ಕತ್ತಿ ಕನಕನಾಯಕನ ದೇಹವನ್ನು ಜರ್ಜರಿತಗೊಳಿಸಿತು ಬಿಚ್ಚುಗತ್ತಿ ಕೈಯಿಂದ ಜಾರಿತು ನಿಲ್ಲಲು ತ್ರಾಣವಿಲ್ಲದೆ ಕುಸಿದ ಕನಕನನ್ನು "ನೀನು ನನ್ನ ದಾಸನಾಗು ಬಾ" ಎಂದು ಯಾರೋ ಕರೆದಂತಾಯಿತು ಅಮೃತ ಸ್ಪರ್ಶ ವಾದಂತಾಯಿತು.ಯಾರೂ ಇಲ್ಲದ ತನ್ನ ಶೂನ್ಯ ಬದುಕಿಗೆ ಪರಮಾತ್ಮನೇ ತನ್ನ ಸೇವೆಗೆ ಕರೆಯುತ್ತಿದ್ದಾನೆ ಎಂದು ತಿಳಿದು ಕಾಗಿನೆಲೆ ಆದಿಕೇಶವನಿಗೆ ದಾಸನಾಗಿರುವುದೇ ಮೇಲೆಂದು ಭಾವಿಸಿದ ರಾಜ ಪ್ರಭು ಖಡ್ಗ ಹಿಡಿದ ಕೈಯಲ್ಲಿ ತಾಳ ತಂಬೂರಿ ಹಿಡಿದು ಬಗಲಿಗೆ ಗೋಪಾಳ ಬುಟ್ಟಿ ಹಾಕಿಕೊಂಡು ಬರಿಗಾಲಲ್ಲೇ ನಡೆದು ಹಂಪೆಗೆ ಬಂದರುಅಲ್ಲಿ ತಾತಾಚಾರ್ಯರನ್ನು ಭೇಟಿಯಾದರು.ರಾಜ ವೈಭವವನ್ನು ಬಿಟ್ಟು ಬರಿಗಾಲಿಲೆ ಬಂದ ಕನಕನನ್ನು ಕಂಡು ತಾತಾಚಾರ್ಯರು ಸಾಂತ್ವನ ಹೇಳಿದರು. ಶ್ರೀಹರಿಯ ದಾಸತ್ವ ಸ್ವೀಕರಿಸಿ ಭವ ಮುಕ್ತಿ ಪಡೆಯಲು ತಿಳಿಸಿದರು.

ವ್ಯಾಸರಾಯರನ್ನು ಕಾಣುವ ಹಂಬಲದಿಂದ ಕನಕದಾಸರು ಮದನಪಲ್ಲಿಗೆ ಬರುತ್ತಾರೆ. ಅವರನ್ನು ಕಂಡು ತನ್ನ ಪರಿಚಯ ಹೇಳಿಕೊಂಡು ತನ್ನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಳ್ಳಿ ಎಂದು ಪ್ರಾರ್ಥಿಸಿಕೊಂಡ.ನನ್ನನ್ನು ಪಾವನಗೊಳಿಸುವ ಮಂತ್ರಬೋಧನೆಯನ್ನು ಮಾಡಬೇಕೆಂದು ಕೇಳಿಕೊಂಡ. ವ್ಯಾಸರಾಯರು ವ್ಯಂಗ್ಯವಾಗಿ ಕುರುಬನಿಗೇನು ಕೊಣ ಮಂತ್ರ ಎನ್ನುವರು. ಪರಮಾತ್ಮನ ಅನುಗ್ರಹ ಪಡೆಯಲು ಇದು ಪರಮ ಮಂತ್ರವೆಂದು ಭಾವಿಸಿ ಕನಕದಾಸರು ಆ ಮಂತ್ರವನ್ನು ಭಕ್ತಿಯಿಂದ ಜಪಿಸಿದರು. ದೇವಲೋಕದ ಕೋಣ ಪ್ರತ್ಯಕ್ಷವಾಗುತ್ತದೆ ಆಗ ವ್ಯಾಸರಾಯರಿಗೂ ಪರಮಾಶರ್ಯವಾಯಿತು. ತಾವು ಕಟ್ಟಿಸುತ್ತಿದ್ದ ಕೆರೆಯ ತೂಬಿಗೆ ಅಡ್ಡವಾಗಿದ್ದ ಬಂಡೆಯನ್ನು ಕೋಣನಿಂದ ತೆಗೆಸಿದರು. ಅದು ಕೋಣನ ಕೆರೆ ಎಂದು ಹೆಸರಾಯಿತು. ವ್ಯಾಸರಾಯರು ಕನಕನ ಭಕ್ತಿ ಮತ್ತು ಜ್ಞಾನದ ಯೋಗ್ಯತೆಯನ್ನು ತಿಳಿದು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಗುರುಕುಲದ ಕರ್ಮಟ ಶಿಷ್ಯರು ಕನಕನನ್ನು ಕಾಡಿಸುತ್ತಾರೆ, ತೊಂದರೆ ಕೊಡುತ್ತಿರುತ್ತಾರೆ. ಕನಕರ ಜ್ಞಾನಶಕ್ತಿಯನ್ನು ಕಾವ್ಯ ಪ್ರತಿಭೆಯನ್ನು ಉಳಿದ ಶಿಷ್ಯರಿಗೆ ತಿಳಿಸುವ ಉದ್ದೇಶದಿಂದ ಕನಕರನ್ನು ಜ್ಞಾನ ಪರೀಕ್ಷೆಗೆ ಒಡ್ಡುತ್ತಾರೆ.

"ಬಾಳೆಹಣ್ಣಿನ ಪ್ರಸಂಗ"

" ನಾನು ಹೋದರೆ ಹೋದೇನು"

" ದೈವ ಸಾಕ್ಷಾತ್ಕಾರ" ಮೊದಲಾದ ಘಟನೆಗಳು ಪವಾಡ ಸದೃಶವಾಗಿ ಜನರ ಬಾಯಲ್ಲಿ ಇಂದಿಗೂ ಉಳಿದಿವೆ. ಕನಕದಾಸರ ಜೀವನದ ವಿಕಾಸದ ದಾರಿಯಲ್ಲಿ ವ್ಯಾಸರಾಯರ ಪಾಲು ಬಹು ದೊಡ್ಡದು. ಕನಕರನ್ನು ಪುಟಕ್ಕಿಟ್ಟು ಶೋಧಿಸಿ ಅಪರಂಜಿ ಮಾಡಿದ ಕೀರ್ತಿ ಅವರದು.

"ದಾಸ ದಾಸರ ಮನೆಯ ದಾಸಾನು ದಾಸ" ಎಂದು ಹಾಡುತ್ತ ನಡೆದ ತಮ್ಮ ನೆಚ್ಚಿನ ಕನಕನಾಯಕನನ್ನು ಬೀಳ್ಕೊಡಲು ಬಾಡದ ಜನರೆಲ್ಲರೂ ಸೇರಿದ್ದರು. ಜನರ ಸೇವಕನಾಗಿದ್ದ ಕನಕ ನಾಯಕ ಕನಕದಾಸನಾಗಿ ಬದಲಾದ ಅಪರೂಪಕ್ಕೆ ಬಾಡಾದ ಜನರೆಲ್ಲ ಸಾಕ್ಷಿಯಾದರು. ಕಾಗಿನೆಲೆಗೆ ಬಂದ ಕನಕದಾಸರು ಶ್ರೀರಂಗನಾಥ ಸ್ವಾಮಿ ಮೂರ್ತಿಯನ್ನು ಆದಿಕೇಶವನ ಹೆಸರಿನಲ್ಲಿ ಪ್ರತಿಷ್ಠಾಪಿಸಿದರು. ಆದಿ ಕೇಶವನ ಗುಡಿಯನ್ನು ತಮ್ಮ ವಾಸದ ನೆಲೆಯನ್ನಾಗಿ ಮಾಡಿಕೊಂಡು ಕೀರ್ತನೆಗಳನ್ನು ಬರೆದರು. 90ಕ್ಕೂ ಹೆಚ್ಚು ಸಾರ್ಥಕ ವಸಂತಗಳನ್ನು ಕಳೆದ ಕನಕದಾಸರು ಕ್ರಿ ಶ 1578 ರಲ್ಲಿ ನಿಧನರಾದರು.

ಕನಕದಾಸರು ಒಬ್ಬ ರಾಜನಾಗಿ ನಮಗೆ ಮುಖ್ಯ ಆಗುವುದಿಲ್ಲ. ಒಬ್ಬ ಕವಿಯಾಗಿ ನಮಗೆ ಮುಖ್ಯ ಆಗುತ್ತಾರೆ. 15-16ನೇ ಶತಮಾನದಲ್ಲಿ ಕನ್ನಡ ಸಾಹಿತ್ಯದಲ್ಲಿ ಕೀರ್ತನ ಸಾಹಿತ್ಯವನ್ನು ಶ್ರೇಷ್ಠ ಮಟ್ಟಕ್ಕೆ ಏರಿಸಿದ ದಾಸ ಪರಂಪರೆಯಲ್ಲಿ ಪುರಂದರದಾಸರು ಮತ್ತು ಕನಕದಾಸರನ್ನು ದಾಸ ಸಾಹಿತ್ಯದ ಅಶ್ವಿನಿ ದೇವತೆಗಳೆಂದು ಕರೆಯಲಾಗುತ್ತದೆ. ಕನಕದಾಸರು ಸುಮಾರು ನಾಲ್ಕು ನೂರಕ್ಕೂ ಹೆಚ್ಚು ಕೀರ್ತನೆಗಳನ್ನು ಬರೆದಿದ್ದಾರೆ. ಅಲ್ಲದೆ ಲಗು ಪದ್ಯ ಪ್ರಕಾರಗಳಲ್ಲಿ ಮುಂಡಿಗೆಗಳು, ಉಗಾಭೋಗಗಳು, ಸುಳಾದಿಗಳು ಎಂಬ ವಿಶೇಷವಾದ ಸಾಹಿತ್ಯದ ಪ್ರಯೋಗವನ್ನೂ ಮಾಡಿದ್ದಾರೆ. ನಳ ಚರಿತ್ರೆ, ಮೋಹನ ತರಂಗಿಣಿ, ಹರಿ ಭಕ್ತಿಸಾರ ಹಾಗೂ ರಾಮಧಾನ್ಯ ಚರಿತೆ ಎಂಬ ಶ್ರೇಷ್ಠ ಕಾವ್ಯಗಳನ್ನು ಅವರು ಬರೆದಿದ್ದಾರೆ. ದಾಸ ಪರಂಪರೆಯಲ್ಲಿ ಕೀರ್ತನೆಗಳನ್ನು ಅಷ್ಟೇ ಅಲ್ಲ ಕಾವ್ಯಗಳನ್ನು ಬರೆದು ಯಶಸ್ವಿಯಾದ ಏಕೈಕ ವ್ಯಕ್ತಿ ಕನಕದಾಸರು.

ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕ ವಿಡಂಬನೆ,ನೀತಿ, ಮೌಲ್ಯ, ಹರಿಸರ್ವೋತ್ತಮನೆಂಬ ಭಕ್ತಿ ಭಾವವನ್ನು ಕಾಣುತ್ತೇವೆ. ಅವರ ಕೀರ್ತನೆಗಳಲ್ಲಿ ಸಾಮಾಜಿಕ ಮೌಲ್ಯವನ್ನು ಎತ್ತಿ ಹಿಡಿಯುವುದರ ಜೊತೆಗೆ ಡಾಂಭಿಕ ಭಕ್ತಿ ಆಚರಣೆಗಳನ್ನು ಒರೆಗಲಿಗೆ ಹಚ್ಚಿ ಪ್ರಶ್ನಿಸುತ್ತಾರೆ. "ಜಪವ ಮಾಡಿದರೇನು ತಪವ ಮಾಡಿದರೇನು ವಿಪರೀತ ಕಪಟ ಗುಣ ಕಲುಷವಿದ್ದವರು" ಎಂದು ಕೇಳುತ್ತಾರೆ.

**"ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ**
**ನಿತ್ಯಜ್ಞಾನಿಯಾದ ಮೇಲೆ ಭಯವು ಯಾತಕೆ**
**॥ ತಾನು ಉಣ್ಣದ ಪರರಿಗಿಕ್ಕದ**
**ಧನವಿದ್ಯಾತಾಕೆ।**
**ಮಾನಹೀನ ನಾಗಿ ಬಾಳುವ ಮನುಜನ್ಯಾತಕೆ"**
**॥**

"ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ"

ಇಂತಹ ಹಲವಾರು ಕೀರ್ತನೆಗಳಲ್ಲಿ ಅವರ ವೈಚಾರಿಕ ಮತ್ತು ಪ್ರಗತಿಪರ ನಿಲುವನ್ನು ಕಾಣುತ್ತೇವೆ.

ಕನಕದಾಸರು ಅಗಾಧವಾದ ಬುದ್ಧಿಶಕ್ತಿ ಕಾವ್ಯ ಪ್ರತಿಭೆಯನ್ನು ಹೊಂದಿದ್ದರೂ ಕೀಳು ಕುಲದವನೆಂಬ ಕಾರಣದಿಂದ ನೋವು, ಹಿಂಸೆ, ಅವಮಾನಗಳನ್ನು ಅನುಭವಿಸಿದರು. ಯಾವುದೇ ಒಬ್ಬ ವ್ಯಕ್ತಿಗೆ ಹುಟ್ಟಿದ ಕುಲ ಮುಖ್ಯವಲ್ಲ ಒಳ್ಳೆಯ ಗುಣ, ಆಚಾರ-ವಿಚಾರ ಮುಖ್ಯ ಎಂಬುದನ್ನು ಸ್ವ ಅನುಭವದ ಮೂಲಕ ಜಗತ್ತಿಗೆ ತೋರಿಸಿಕೊಟ್ಟರು. "ಕುಲ ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ" ಎಂದು ಕೇಳುತ್ತಾರೆ.

ನಾಡಿನ ಮೂಲೆ ಮೂಲೆಯಲ್ಲೂ ಸಂಚರಿಸಿ ತಮ್ಮ ಕೀರ್ತನೆಗಳ ಮೂಲಕ ಜನರಲ್ಲಿದ್ದ ಅಂಧಶ್ರದ್ಧೆ, ಮೂಢನಂಬಿಕೆ, ಭೇದಭಾವ, ಮೇಲು ಕೀಳು, ಜಾತಿಯತೆಯನ್ನು ತೊಲಗಿಸಿ ಸಮಾನತೆಯನ್ನು ತರಲು ಶ್ರಮಿಸಿದರು. ಕರ್ನಾಟಕದಲ್ಲಷ್ಟೇ ಅಲ್ಲ ಆಂಧ್ರಪ್ರದೇಶ, ತಮಿಳುನಾಡು, ರಾಜಸ್ಥಾನಗಳಲ್ಲೂ ಸಂಚರಿಸಿ ಜನರ ಪ್ರೀತಿಗೆ ಪಾತ್ರರಾಗಿದ್ದರು. ತಮಿಳುನಾಡಿನ ತಂಜಾವೂರಿನ ಬಳಿ ಕನಕನ ಕೊಳ ಇದೆ ಮತ್ತು ವರವೂರು ಎಂಬ ಸ್ಥಳದಲ್ಲಿ 175 ಕನಕದಾಸರ ಕೀರ್ತನೆಗಳ ಓಲೆ ಗರಿ ಕಟ್ಟು ಸಿಕ್ಕಿದೆ ಎಂದು ಹೇಳಲಾಗುತ್ತದೆ. ರಾಜಸ್ಥಾನದ ಜೈಪುರ ಅರಮನೆಯ ಪ್ರದೇಶದಲ್ಲಿ ಕನಕ ಬೃಂದಾವನವನ್ನು ನಿರ್ಮಿಸಲಾಗಿದೆ. ರಾಣ ಪ್ರತಾಪ್ ಸಿಂಹನ ಕಾಲದಲ್ಲಿ ರಾಜಸ್ಥಾನಕ್ಕೆ ಹೋಗಿದ್ದು ಅಲ್ಲಿಯ ಜನರ ಪ್ರೀತಿಗೆ ಪಾತ್ರರಾಗಿರುವುದು ಇದರಿಂದ ನಮಗೆ ಗೊತ್ತಾಗುತ್ತದೆ.

ಸುಮಾರು 500 ವರ್ಷಗಳ ಹಿಂದೆ ಆಗಿ ಹೋದ ಕನಕದಾಸರು ಇಂದಿಗೂ ನಮಗೆ ಪ್ರಸ್ತುತ ರಾಗುತ್ತಾರೆ. ಮನುಜ ಮತ ವಿಶ್ವ ಪಥವೆಂದು ಸಾರಿದ ರಾಷ್ಟ್ರಕವಿ ಕುವೆಂಪು ಅವರಲ್ಲಿ ನಾವು ಕನಕದಾಸರ ವೈಚಾರಿಕ ಮತ್ತು ಪ್ರಗತಿಪರ ನಿಲುವನ್ನು ಕಾಣುತ್ತೇವೆ.




ಅರುಣಾ ನರೇಂದ್ರ
7829046698

## ಹಳಗನ್ನಡ ಸಾಹಿತ್ಯ ಬೋಧನಾ ತರಬೇತಿ ಶಿಬಿರ

# ಡಾ.ಡಿ.ಎಲ್.ನರಸಿಂಹಚಾರ್ ಕನ್ನಡ ಭಾಷಾ ವಿದ್ವತ್ತಿನ ಅಸ್ಮಿತೆ: ಡಾ. ಪರಮಶಿವಮೂರ್ತಿ

**ಜಮಖಂಡಿ :** ಹಳಗನ್ನಡದ ಮೊದಲ ತಲೆಮಾರಿನ ವಿದ್ವಾಂಸರಾಗಿ ಕನ್ನಡ ಭಾಷೆಯ ಶಾಸ್ತ್ರೀಯ ವಿಷಯಗಳ ಸಂಶೋಧನೆ ಮತ್ತು ಸಂಪಾದನೆಯಲ್ಲಿ ಪರಿಶ್ರಮವಹಿಸಿದ ವಿದ್ವಾಂಸ ಡಾ.ಡಿ.ಎಲ್.ನರಸಿಂಹಾಚಾರ ಅವರು ಕನ್ನಡ ಭಾಷಾ ವಿದ್ವತ್ತಿನ ಅಸ್ಮೀತೆಯಾಗಿದ್ದಾರೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ.ಪರಮಶಿವಮೂರ್ತಿ ಹೇಳಿದರು

ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ ಬಾಗಲಕೋಟೆ, ಕಸಾಪ ತಾಲೂಕ ಘಟಕ ಜಮಖಂಡಿ, ಬಾಗಲಕೋಟೆ ಜಿಲ್ಲಾ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಹಾಗೂ ಜಮಖಂಡಿಯ ಬಾಲಕೆಯರ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯ ಪ್ರೌಢಶಾಲಾ ವಿಭಾಗ ಇವರ ಸಹಯೊಗದಲ್ಲಿ ಶುಕ್ರವಾರ ಪ್ರೌಡಶಾಲಾ ವಿಭಾಗದ ಜ್ಞಾನ ಭುವನದಲ್ಲಿ ಡಾ.ಡಿ.ಎಲ್.ನರಸಿಂಹಚಾರ್ ದತ್ತಿನಿಧಿ ಅಂಗವಾಗಿ ಕನ್ನಡ ಶಿಕ್ಷಕರಿಗೆ 4 ದಿನಗಳ 'ಹಳಗನ್ನಡ ಸಾಹಿತ್ಯ ಬೋಧನಾ ತರಬೇತಿ ಶಿಬಿರದಲ್ಲಿ 'ಡಾ.ಡಿ.ಎಲ್. ನರಸಿಂಹಾಚಾರ ಅವರ ಸಾಹಿತ್ಯ ಸಾಧನೆ' ಕುರಿತು ವಿಷಯ ಮಂಡಸಿ ಮಾತನಾಡಿದರು.





ಕನ್ನಡಭಾಷೆಗೆಹಿನ್ನಡೆಯಾಗುವಸಂದರ್ಭದಲ್ಲಿ ಕನ್ನಡ ಭಾಷೆಯ ಶಾಸ್ತ್ರೀಯ ವಿಚಾರಗಳು ಕನ್ನಡ ಅಸ್ಮೀತೆಯಂದು ಮುನ್ನಲೆಗೆ ತರುವ ಕೆಲಸವನ್ನು ಡಾ.ಡಿ.ಎಲ್.ನರಸಿಂಹಾಚಾರ್ ಮಾಡಿದ್ದಾರೆ, ರಾಷ್ಟ್ರದ ಇನ್ನಿತರ ಭಾಷೆಯ ಸಂಘರ್ಷದಲ್ಲಿ ಮತ್ತು ಕನ್ನಡ ಭಾಷೆ ಚಾ–ರಿತ್ರಿಕವಾಗಿ ನಿಲ್ಲುವಲ್ಲಿ ವಿದೇಶಿ ವಿದ್ವಾಂಸರಿಗಿಂತ ಭಿನ್ನವಾಗಿ ಕನ್ನಡವನ್ನು ಐತಿಹಾಸಿಕವಾಗಿ ಕಟ್ಟುವ ಕಾರ್ಯವನ್ನು ನಮ್ಮ ಕನ್ನಡದ ಹಿರಿಯ ವಿದ್ವಾಂಸರಾದ ಡಾ.ಡಿ.ಎಲ್.ಎನ್, ತಿನಂಶ್ರೀ. ಎ.ಆರ್.ಕೃಷ್ಣಶಾಸ್ತ್ರಿ, ಟಿ.ಎಸ್..ವೆಂಕಣ್ಣಯ್ಯ ಮುಂತಾದ ಪ್ರಮುಖರು ಹಳಗನ್ನಡ ಸಾಹಿತ್ಯ ಕೃಷಿಮಾಡಿದ್ದಾರೆ.ಯಾವುದೆಭಾಷೆಯಸಾಹಿತ್ಯ ಸಾಮಾಜಿಕಗೊಂಡರೆ ಗತಿಶೀಲ ಗುಣವನ್ನು ಹಾಗೂ ಹೊಸ ಹೊಳವು ಪಡೆಯಲು ಸಾಧ್ಯವಗುತ್ತದೆ, ಅಂತಹ ಗುಣವನ್ನು ಡಾ.ನರಸಿಂಹಾಚಾರ್ ಅವರ ಸಂಶೋಧನ ಬರಹಗಳಲ್ಲಿ ಕಾಣಬಹುದು, ಕನ್ನಡ ಗ್ರಂಥ ಸಂಪಾದನೆ, ಪೀಠಿಕೆಗಳು, ಲೇಖನಗಳು, ವಡ್ಡಾರಾಧನೆ, ಪಂಪ ರಾಮಾಯಣ, ಶಬ್ದಮರ್ಣಿದರ್ಪಣ, ಸಿದ್ದರಾಮಚರಿತೆ, ಸಕಲ ವೈದ್ಯಸಂಹಿತಾ ಸಾರಾರ್ಣವ ಇವು ಅವರ ಅಧ್ಯಯನ ಪೂರ್ವ ಕೃತಿಗಳಾಗಿವೆ ಹಳೆತಲೆಮಾರು ಹಾಗೂ ಹೊಸ ತಲೆಮಾ–ರಿನವರಿಗೆ ಇವರು ಮಾದರಿಯಾಗಿದ್ದಾರೆ ಎಂದರು.

ಎರಡನೆಯ ಅವಧಿಯಲ್ಲಿ 'ಭಾಷಾಭ್ಯಾಸ' ವಿಷಯ ಕುರಿತು ವಿಷಯ ಮಂಡನೆ ಮಾಡಿದ ಭಾಷಾ ವಿಜ್ಞಾನಿಗಳಾದ ಡಾ.ಎ.ಮುರಗೆಪ್ಪ ಅವರು ಮಾತನಾಡಿ. ಇತ್ತಿಚೀಗೆ ಕನ್ನಡ ಸಾಹಿತ್ಯ ವಲಯದಲ್ಲಿ ಪ್ರಾಚೀನ ಸಾಹಿತ್ಯದ ಅಧ್ಯಯನ ತುಂಬಾ ಉಪೇಕ್ಷೆಗೆ ಒಳಗಾಗುತ್ತಿದೆ. ಅದಕ್ಕಾಗಿ ಪ್ರಾಚೀನ ಪಠ್ಯಗಳ ಪ್ರಸ್ತುತತೆ ಕೃತಿ ವಾಚನ, ಕಥಾ ನಿರೂಪಣೆ,

ಪಾಠ ಸಮಸ್ಯೆ ಬಿಡಿಸುವುದು ಹಾಗೂ ಕೃತಿ, ಭಾಷೆ, ಶೈಲಿ, ಛಂದಾಸ್ವಾಧಿಗಳನ್ನು ಹಾಗೂ ಕೃತಿಯ ಸಾಂಸ್ಕೃತಿಕ ಪರಿಸರ ಹಾಗೂ ಅನ್ಯನ್ಯತೆಯನ್ನು ಗುರುತಿಸುವುದು ಆ ಮೂಲಕ ಶಿಕ್ಷಕ ಮತ್ತು ವಿದ್ಯಾರ್ಥಿಗಳಲ್ಲಿ ಹಳಗನ್ನಡ ಸಾಹಿತ್ಯವನ್ನು ಓದುವ ಗ್ರಹಿಸುವ ಮತ್ತು ಆಸಕ್ತಿ ಹೆಚ್ಚಿಸುವ ಉಪಕ್ರಮಗಳನ್ನು ಕೈಗೊಳ್ಳುವ ಮೂಲಕ ಹಳಗನ್ನಡ ಸಾಹಿತ್ಯ ಬೋಧನೆಯಲ್ಲಿ ಭಾಷಿಕತೆಯ ಅಂಶಗಳನ್ನು ಅರಿತುಕೊಂಡು ಶಿಕ್ಷಕರು ಪಾಠ ಮಾಡಿದರೆ ಮಕ್ಕಳಲ್ಲಿ ಭಾಷಾ ಜ್ಞಾನ ಸಂಪತ್ತು ಬೆಳಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಶಿಬಿರದ ನಿರ್ದೇಶಕರಾದ ಡಾ.ವೀರೇಶ ಬಡಿಗೇರ, ಉಪ ಪ್ರಾಚಾರ್ಯರಾದ ಮಹಾಂತೇಶ ನರಸನಗೌಡ್ರ. ಜಿಲ್ಲಾ ಗೌರವ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ, ಜಮಖಂಡಿ ಕಸಾಪ ತಾಲೂಕ ಅಧ್ಯಕ್ಷ ಸಂತೋಷ ತಳಕೇರಿ, ಸಂಗಮೇಶ ಬಡಿಗೇರ, ಹಾಗೂ ನಾಡಿನ ವಿವಿಧ ಭಾಗಗಳಿಂದ ವಿದ್ವಾಂಸರು, ಸಂಪನ್ಮೂಲ ವ್ಯಕ್ತಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

# ಪ್ರಬಂಧಕ ಶ್ರೀನಿವಾಸ ದೇಶಪಾಂಡೆ ಹೇಳಿಕೆ

## ಎಸ್‌ಬಿಐದಿಂದ ಪಿಂಚಣಿದಾರರಿಗೆ ಉಪಯುಕ್ತ ಯೋಜನೆಗಳು

**ಮೂಡಲಗಿ :** 'ಸ್ಟೇಟ್ ಬ್ಯಾಂಕ್‌ಆಫ್‌ಇಂಡಿಯಾದಲ್ಲಿ ಪಿಂಚಣಿದಾರರಿಗೆ ವಿವಿಧ ಸಾಲದ ಯೋಜನೆಗಳು ಇದ್ದು ಪಿಂಚಣಿದಾರರು ಅವುಗಳ ಸದುಪಯೋಗಪಡಿಸಿಕೊಳ್ಳಬೇಕು' ಎಂದುಎಸ್‌ಬಿಐ ಮೂಡಲಗಿ ಶಾಖೆಯಹಿರಿಯಪ್ರಬಂಧಕಶ್ರೀನಿವಾಸದೇಶಪಾಂಡೆಅವರುಹೇಳಿದರು. ಇಲ್ಲಿಯ ಸ್ಟೇಟ್ ಬ್ಯಾಂಕ್‌ಇಂಡಿಯಾಕಚೇರಿಯಲ್ಲಿ ಪಿಂಚಣಿದಾರರಿಗೆ ಬ್ಯಾಂಕ್ ಸೌಲಭ್ಯಗಳು ಕುರಿತು ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದಅವರುಕಡಿಮೆ ಬಡ್ಡಿದರ ಮತ್ತು ಹೆಚ್ಚು ಕಂತುಗಳಲ್ಲಿ ಮರಳಿ ಕೊಡುವ ಸಾಲದ ಯೋಜನೆಗಳಿದ್ದು ಪಿಂಚಣಿದಾರರಿಗೆಯಾವುದೇ ದಾಖಲೆಗಳು ಇಲ್ಲದೆ ಸಾಲವನ್ನುಕಡಿಮೆಅವಧಿಯಲ್ಲಿ ನೀಡಲಾಗುವುದುಎಂದರು. ಎಸ್‌ಬಿಐಅಮೃತ ವೃಷ್ಟಿ ಠೇವಣಿ ಸೇರಿದಂತೆ ಡೆಬೆಂಚರ್‌ಗಳಲ್ಲಿ ಉಳಿತಾಯ ಮಾಡುವ ಅವಕಾಶಗಳು ಇದ್ದುಠೇವಣಿಇಡುವ ಹಣಕ್ಕೆ ಭದ್ರತೆಇರುತ್ತದೆಎಂದರು.

ಎಸ್‌ಬಿಐಯೋನೋಆಪ್. ಪೆನಶೆನ್ ಸೇವಾ ಆಪ್‌ಗಳ ಬಳಕೆಯ ಬಗ್ಗೆ ತಿಳಿಸಿದರು.

ಸಹಾಯಕ ಪ್ರಬಂಧಕರಾದ ಹಣಮಂತ ವ್ಯಾಪಾರಿ, ರಾಜುಕಾನಡಾ, ವಿಜಯಕುಮಾರಧಾನಾವಥ ಬ್ಯಾಂಕ್ ಸೌಲಭ್ಯಗಳ ಕುರಿತು ತಿಳಿಸಿದರು.

ನಿವೃತ್ತ ಪ್ರಾಚಾರ್ಯರಾ ಪ್ರೊ.ಆರ್.ಎ. ಶಾಸ್ತ್ರೀಮಠ, ಪ್ರೊ. ಹೊಂಗಲ,



ಪಿ.ಕೆ.ರಡ್ಡೇರ,ಖಾನಟ್ಟಿಯಗುಗ್ಗರಿ,ಎಸ್.ಎ.ಶಾಸ್ತ್ರೀಮಠ,ಬಿ.ಸಿ.ಪಾಟೀಲ, ಬಾಲಶೇಖರ ಬಂದಿ ಸೇರಿದಂತೆ ವಿವಿಧಇಲಾಖೆಯ ಪಿಂಚಣಿದಾರರು ಭಾಗವಹಿಸಿದ್ದರು.

# ರಾಣಿ ಚನ್ನಮ್ಮ ವಿ.ವಿ. ಅಂತರ್ ಕಾಲೇಜು ಯೋಗಾಸನ ಸ್ಪರ್ಧೆ

## ಕಲ್ಲೋಳಿ ರಾಮಲಿಂಗೇಶ್ವರ ಪದವಿ ಕಾಲೇಜ್ ಯೋಗ ಸ್ಪರ್ಧೆಯಲ್ಲಿ ಸಾಧನೆ

**ಮೂಡಲಗಿ :** ತಾಲೂಕಿನ ಕಲ್ಲೋಳಿ ಪಟ್ಟಣದ ಶ್ರೀ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಪ್ರಥಮ ದರ್ಜೆ ಕಾಲೇಜಿನ ಸಹಯೋಗದಲ್ಲಿ ಆಯೋಜಿಸಿದ್ದ 2024–25 ನೇ ಸಾಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಅಂತರ್ ಕಾಲೇಜುಗಳ ಏಕವಲಯ ಪುರುಷರ ಹಾಗೂ ಮಹಿಳೆಯರ ಯೋಗಾಸನ ಪಂದ್ಯಾವಳಿಯಲ್ಲಿ ಆಥಿತ್ಯ ಕಾಲೇಜು ತಂಡ ಪುರುಷ ಮತ್ತು ಮಹಿಳಾ ವಿಭಾಗದಲ್ಲಿ ರನ್ನರ್ ಅಪ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಸಂಜು ಘೋಡಗೇರಿ (ಸಾಂಪ್ರದಾಯಿಕ ಮತ್ತು ತಾಳಬದ್ದ ಎರಡು ವಿಭಾಗಗಳಲ್ಲಿ) ಪ್ರಿಯಾಂಕಾ ಬಳೋಬಾಳ (ಸಾಂಪ್ರದಾಯಿಕ ಗುಂಪು), ಗಂಗವ್ವ ಸನದಿ(ಕಲಾತ್ಮಕ ವೈಯಕ್ತಿಕ) ಪ್ರೇಮಾ ಕೊಡ್ಲಿಕಾರ(ಸಾಂಪ್ರದಾಯಿಕ ವೈಯಕ್ತಿಕ) ಅವರುಗಳು ಯುನಿವರ್ಸಿಟಿ ಬ್ಲೂ ಆಗಿ



ರಾಷ್ಟ್ರಮಟ್ಟಕ್ಕೆ ಆಯ್ಕೆ ಆಗಿದ್ದಾರೆ. ವಿಜಯಲಕ್ಷ್ಮಿ ಈರೇಶನವರ, ವೈಶಾಲಿ ಪಾಟೀಲ, ಗಾಯತ್ರಿ ಪೋಟೆ, ವಿಕಾಸ ಬಾಗಾಯಿ ಇನ್ನಿತರರು ಗುಂಪು ಯೋಗಾಸನದಲ್ಲಿ ಭಾಗವಹಿಸಿದ್ದರು. ಸಾಧನೆಗೈದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಚೇರಮನ್ನ ಬಸಗೌಡ ಶಿ. ಪಾಟೀಲ, ಆಡಳಿತ ಮಂಡಳಿಯ ಸರ್ವ ಸದಸ್ಯರು, ಕಾಲೇಜಿನ ಪ್ರಾಚಾರ್ಯ ಡಾ. ಸುರೇಶ ಹನಗಂಡಿ, ದೈಹಿಕ ನಿರ್ದೇಶಕ ಬಿ.ಕೆ. ಸೊಂಟನವರ, ಕ್ರೀಡಾ ಕಾರ್ಯದರ್ಶಿ ಬಿ.ಬಿ. ವಾಲಿ, ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಶಂಕರ ನಿಂಗನೂರ, ಕಾಲೇಜಿನ ಬೋಧಕ/ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ.

## ಬಾಗಲಕೋಟೆ ನವನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಭವನದಲ್ಲಿ ಓಲೆಮಠದ ಪೂಜ್ಯರಿಗೆ ಶ್ರದ್ಧಾಂಜಲಿ

# ಜಮಖಂಡಿ ಓಲೆಮಠದ ಪೂಜ್ಯ ಡಾ.ಚನ್ನಬಸವ ಸ್ವಾಮಿಜಿಯವರಿಗೆ ನುಡಿ ನಮನ

**ಬಾಗಲಕೋಟೆ :** ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಸಭಾಭವನದಲ್ಲಿ ಜಮಖಂಡಿ ಓಲೆಮಠದ ಪರಮಪೂಜ್ಯ ಲಿಂಗೈಕ್ಯ ಡಾ.ಚನ್ನಬಸವ ಮಹಾಸ್ವಾಮಿಗಳವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿ ನುಡಿ ನಮನ ಅರ್ಪಣೆ ಮಾಡಲಾಯಿತು.

ಜಿಲ್ಲಾ ಕಸಾಪ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅವರು ನುಡಿ ನಮನ ಸಲ್ಲಿಸಿ ಮಾತನಾಡಿ ನಮ್ಮ ನಾಡಿನ ಸಾಹಿತ್ಯ, ಸಾಂಸ್ಕೃತಿ–ಕ, ಆಧ್ಯಾತ್ಮಿಕ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಓಲೆಮಠದ ಪೂಜ್ಯರ ಅಗಲಿಕೆಯಿಂದ ತುಂಬಲಾರದ ನಷ್ಟುವುಂಟಾಗಿದೆ.



ಪೂಜ್ಯರು ಆದ–ನಿಕ ವಚನಕಾರರಾಗಿ, ಪ್ರಖರ ಜ್ಞಾನಿಗಳಾಗಿ, ಖ್ಯಾತ ಪ್ರವಚನಕಾರರಾಗಿ ಮತ್ತು ಸಂಗೀತ, ಸಾಹಿತ್ಯ ಪರಂಪರೆ ಅಪಾರ ಕೊಡುಗೆಯನ್ನು ನೀಡಿ ನಾಡನ್ನು ಶ್ರೀಮಂತಗೊಳಿಸಿದ್ದಾರೆ ಎಂದು ಹೇಳಿದರು. ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಡಾ.ಚಂದ್ರಶೇಖರ ಕಾಳನ್ನವರ, ಭಾಷಾ ಚಿಂತಕ ಪ್ರೊ.ಸಂಗಮೇಶ ಬ್ಯಾಳಿ, ಕರ್ನಾಟಕ ಜಾನಪದ ಪರಿಷತ್ತಿನ ಜಿಲ್ಲಾ ಕೋಶಾಧ್ಯಕ್ಷ ಆರ್.ಸಿ.ಚಿತ್ತವಾಡಗಿ ಅವರು ನುಡಿ ನಮನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪೂಜ್ಯರಿಗೆ ನುಡಿ ನಮನ ಸಲ್ಲಿಸಿದರು.

# ಕೃಷ್ಣಾ ಬಿ ಸ್ಕೀಮ್ ತಕ್ಷಣ ಜಾರಿ ಮಾಡಿ, ಕರ್ನಾಟಕ ರೈತ ಜನ ಸಂಘ ಹಾಗೂ ಹಸಿರು ಸೇನೆ: ರಾಜ್ಯಾಧ್ಯೇಕ್ಷರ ಆಗ್ರಹ!

**ಕೊಪ್ಪಳ :** ಜಿಲ್ಲೆಯಲ್ಲಿ ಕೃಷ್ಣಾ ಬಿ ಸ್ಕೀಮ್ ತಕ್ಷಣ ಜಾರಿ ಮಾಡಿ, ಕೊಪ್ಪಳ,ಕುಷ್ಟಗಿ, ಯಲಬುರ್ಗಾ, ಕನಕಗಿರಿ,ಎಲ್ಲಾ ತಾಲೂಕುಗಳು ಸಂಪೂರ್ಣ ನೀರಾವರಿ ಪ್ರದೇಶಗಲಾಗುತ್ತದೆ.ಎಂದು ರಾಜ್ಯಾಧ್ಯಕ್ಷ ವೀರನಗೌಡ ಮಾಲಿಪಾಟೀಲ ನಗರದ ಪತ್ರಿಕಾ ಭವನದಲ್ಲಿ ಪತ್ರಿಕಾ ಗೋಷ್ಠಿ ಉದ್ದೇಶಿಸಿ ಮಾತನಾಡಿದರು.ಜಿಲ್ಲೆಯಲ್ಲಿ ತುಂಗಭದ್ರಾ ಯೋಜನೆ ವ್ಯಾಪ್ತಿಯಲ್ಲಿ ಸ್ವಲ್ಪ ಪ್ರಮಾಣದ ಭೂಮಿ ನೀರಾವರಿಯಾಗಿದೆ ಅಷ್ಟೇ ಅಲ್ಲದೆ,70% ವಣ ಭೂಮಿ ಇದೆ ಈ ಭೂಮಿಯ ಮಳೆಯ ಆಧಾರಿತ ಪ್ರದೇಶಗಳಾಗಿವೆ ಮಳೆ ಬಂದ್ರೆ ಬೆಳೆಇಲ್ಲಾ ದುಡಿಯಲು ಬೆಂಗಳೂರು,ಮಂಗಳೂರು,ಮುಂಬೈಗೆ,ದುಡಿಯಲು ವಲಸೆ ಹೋಗಬೇಕಾಗುತ್ತದೆ ಕೃಷ್ಣ ಬಿ ಸ್ಕೀಮ್ ಯೋಜನೆ ಹೋರಾಟ ಪ್ರಾರಂಭವಾಗಿ ಸುಮಾರು 10–12 ವರ್ಷಗಳಾಗಿವೆ ಯೋಜನೆ ಪರಿಪೂರ್ಣ ಆಗಿಲ್ಲ ಆಗಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಈ ಯೋಜನೆ ಅನುಷ್ಠಾನಕ್ಕಾಗಿ ಬೇವೂರಿನಲ್ಲಿ ಒಂದು ಕಾರ್ಯಕ್ರಮ ಮಾಡಲಾಗಿತ್ತು.ಈ ಯೋಜನೆ ಸಂಪೂರ್ಣ ಅನುಷ್ಠಾನವಾದರೆ, ಸುಮಾರು 2.701%




ಲಕ್ಷ ಎಕರೆ ಭೂಮಿ ನೀರಾವರಿ ಪ್ರದೇಶವಾಗಿ ಮಾರ್ಪಾಡಾಗುತ್ತದೆ ರೈತರು ಕಾರ್ಮಿಕರು ಬಡವರು ಗುಳೇ ಹೋಗುವುದು ತಪ್ಪುತ್ತದೆ ಇದರಿಂದ ಜನ ಇಲ್ಲಿ ಬದುಕನ್ನು ಕಟ್ಟಿಕೊಳ್ಳಲು ಈ ಯೋಜನೆ ಆದಷ್ಟು ಬೇಗ ಕೈಗೊಳ್ಳಬೇಕು ಎಂದು ಸಂಬಂಧಪಟ್ಟ ಜನ ಪ್ರತಿನಿಧಿಗಳಿಗೆ ಸಚಿವರಿಗೆ ಮನವಿ ಸಲ್ಲಿಸಿ ಒತ್ತಾಯಿಸುತ್ತೇವೆ ಅದಕ್ಕೂ ನಿರ್ಲಕ್ಷ ವಹಿಸಿದರೆ ನಮ್ಮ ರೈತ ಸಂಘಟನೆಯ ಸಭೆಯನ್ನು ಮುಂದಿನ ಹೋರಾಟದ ರೂಪರೇಷೆ ತಯಾರಿಸಿ ಹಂತ ಹಂತವಾಗಿ ಹೋರಾಟ ಮಾಡಲಾಗುತ್ತದೆ. ಎಂದು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು. ಈ ಸಂಧರ್ಭದಲ್ಲಿ ಗುರನಗೌಡ ಪಾಟೀಲ್ ರಾಜ್ಯಉಪಾಧ್ಯಕ್ಷ,ವಿಶ್ವನಾಥ ಬ್ಯಾಡಗಿ,ಕೊಪ್ಪಳ ಜಿಲ್ಲಾ ಅಧ್ಯಕ್ಷ,ಹುಲಗಪ್ಪ ಹೊಸಮನಿ, ಕಾರಟಗಿ ತಾಲೂಕ ಅಧ್ಯಕ್ಷ, ಶರಣಪ್ಪ ಗಂಗಣ್ಣ, ಗಂಗಾವತಿ ತಾಲೂಕ ಅಧ್ಯಕ್ಷ, ಶಿವು ಈಳಿಗನೂರ, ರಾಮಾಂಜನಯ್ಯ್, ಮಹಾದೇವ ಬಡಿಗೇರ, ಬಸವರಾಜ, ಹನುಮೇಶ ಹುಲಿಹೈದರ, ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾಗಿ ಎ.ಬಿ.ಕುಮಾರ್–ಅಭಿನಂದಿಸಿದ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್

**ಕೆ.ಆರ್.ಪೇಟೆ :** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಕೆ.ಆರ್.ಪೇಟೆ ತಾಲ್ಲೂಕು ಅಧ್ಯಕ್ಷರಾಗಿ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್ ಅವರನ್ನು ನೇಮಕ ಮಾಡಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ.

ಉಳಿದಂತೆ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾಗಿ ವಳಗೆರೆ ಮೆಣಸ ಕುಮಾರ್, ಚಟ್ಟೇನಹಳ್ಳಿ ಉದೇಶ್, ಸಿಂಗನಹಳ್ಳಿ ಗೋಪಾಲ್, ಬಂಡಿಹೊಳೆ ಯೋಗೇಶ್, ಗೋವಿಂದನಹಳ್ಳಿಕೊಪ್ಪಲು ಶ್ಯಾಮಣ್ಣ, ಬೂಕನಕೆರೆ ಬಿ.ಸಿ.ಮಾಧು, ದೊಡ್ಡತಾರಹಳ್ಳಿ ಸೋಮಶೇಖರ್, ಅಗ್ರಹಾರ ಕೆ.ಎಸ್.ಆರ್.ಟಿ.ಸಿ ಶಿವಣ್ಣ, ಗೊರವಿ ಕುಮಾರ್, ಟೌನ್ ಕನಕದಾಸನಗರ ಶಿವಮ್ಮ, ಸಿಂಧುಘಟ್ಟ ಅಫೀಜ್ ಉಲ್ಲಾ, ಬೊಮ್ಮೇನಹಳ್ಳಿ ಲತಾ, ಬೂಕನಕೆರೆ ರೂಪಾ, ಯಗಚಗುಪ್ಪೆ ಶಿವಲಿಂಗಪ್ಪ, ಹಾಗೂ ಸದಸ್ಯ ಕಾರ್ಯದರ್ಶಿಯಾಗಿ ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಸುಷ್ಮಾ ಅವರನ್ನು ನೇಮಕ ಮಾಡಿ ಮಂಡ್ಯ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೊರಡಿಸಿರುವ ತಮ್ಮ ಲಿಖಿತ



ಆದೇಶದಲ್ಲಿ ತಿಳಿಸಿದ್ದಾರೆ.

ನೂತನ ಅಧ್ಯಕ್ಷರಾದ ಎ.ಬಿ.ಕುಮಾರ್ ಅವರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಅವರು, ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ರಾಜ್ಯ ಸರ್ಕಾರವು ಗ್ಯಾರಂಟಿ ಅನುಷ್ಠಾನ ಸಮಿತಿಯನ್ನು ರಾಜ್ಯ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ರಚನೆ ಮಾಡಿರುವುದು ಶ್ಲಾಘನೀಯವಾದುದು. ನಮ್ಮ ಸರ್ಕಾರವು ಮಾಡುತ್ತಿರುವ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವ ಕೆಲಸವನ್ನು ಈ ಸಮಿತಿಯು ಮಾಡಬೇಕು. ಈ ಮೂಲಕ ಮುಂಬರುವ ಎಲ್ಲಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರಲು ಸಮಿತಿಯು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಗೃಹಲಕ್ಷ್ಮೀ ಯೋಜನೆ, ಗೃಹ ಜ್ಯೋತಿ ಯೋಜನೆ, ಶಕ್ತಿ ಯೋಜನೆ, ಯುವ ನಿಧಿ ಯೋಜನೆಗಳು ಜನರ ಸ್ವಾವಲಂಬನೆಗೆ ಹಾಗೂ ಆರ್ಥಿಕ ಸದೃಢತೆಗೆ ಸಹಕಾರಿಯಾಗಿವೆ ಇದನ್ನು ಕಾಂಗ್ರೆಸ್ ಸರ್ಕಾರವು ನೀಡಿದೆ ಎಂಬುದನ್ನು ಜನಸಾಮಾನ್ಯರಿಗೆ ಮನವರಿಕೆ ಮಾಡಿಕೊಡುವ ಅಗತ್ಯವಾಗಿದೆ ಎಂದು ಕೆ.ಬಿ.ಚಂದ್ರಶೇಖರ್ ಅಭಿಪ್ರಾಯಪಟ್ಟರು.

ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಟಾನ ಸಮಿತಿಯ ನೂತನ ಅಧ್ಯಕ್ಷರಾದ ಎ.ಬಿ.ಕುಮಾರ್ ಹಾಗೂ ಎಲ್ಲಾ ಸದಸ್ಯರನ್ನು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್,ಬಿ.ಪ್ರಕಾಶ್, ತಾಲ್ಲೂಕು ಟಿಎಪಿಸಿಎಂಎಸ್ ಸಂಸ್ಥೆಯ ಅಧ್ಯಕ್ಷ ಬಿ.ಎಲ್. ದೇವರಾಜು, ಕೆಯುಐಡಿಎಫ್ ಸಿ ನಿಗಮದ ಮಾಜಿ ರಾಜ್ಯಾಧ್ಯಕ್ಷ ಎಂ.ಡಿ.ಕೃಷ್ಣಮೂರ್ತಿ, ಕಾಂಗ್ರೆಸ್ ಮುಖಂಡರಾದ ವಿಜಯ್ ರಾಮೇಗೌಡ, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ.ನಾಗೇಂದ್ರಕುಮಾರ್, ಹರಳಹಳ್ಳಿ ವಿಶ್ವನಾಥ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ರಾಜಶೇಖರ್, ಕುವೆಂಪು ಸೇವಾ ಟ್ರಸ್ಟಿನ ಅಧ್ಯಕ್ಷ ಕೆಬಿಸಿ ಮಂಜುನಾಥ್, ಪುರಸಭಾ ಸದಸ್ಯರಾದ ಸದಸ್ಯ ಕೆ.ಆರ್.ರವೀಂದ್ರಬಾಬು, ಹಾಫೀಜುಲ್ಲಾ ಷರೀಫ್,

ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಬಿ.ಪುಟ್ಟಸ್ವಾಮೀಗೌಡ, ಸೊಸೈಟಿ ನಿರ್ದೇಶಕ ಸೀಮೆ ಎ.ಬಿ.ಮಹೇಂದ್ರ, ಗ್ರಾ.ಪಂ. ಮಾಜಿ ಉಪಾಧ್ಯಕ್ಷ ರಾದ ಎ.ಬಿ.ದೇವರಾಜು, ಮಾಜಿ ಸದಸ್ಯ ಎ.ಸಿ.ಮುರುಳಿ, ಎ.ಎಸ್. ರಾಮಚಂದ್ರೇಗೌಡ, ಅರೆಕಲ್ಲಟ್ಟಿ ಉದ್ದಾನಿ ಮಹದೇವೇಗೌಡ, ಗವಿಯಣ್ಣನ ಪುಟ್ಟೇಗೌಡ, ಯಜಮಾನ್ ಲಾಳಿ ಬೋ–ರೇಗೌಡ, ಎ.ಕೆ.ಸುನಿಲ್, ಎ.ಡಿ.ರವಿ, ಡಾ.ರತೀಶ್‌ಕುಮಾರ್, ಕಾಲೋನಿ ದೇವರಾಜು, ಗಾರೆ ದೇವರಾಜು, ಮನು, ಜಲೇಂದ್ರ, ನಿಶಾಂತ್ ಪಟೇಲ್, ಮಾಟಣ್ಣ ನಾಗರಾಜು, ಮಾಸ್ತಿ ದೇವರಾಜು, ಬಳ್ಳೇ–ಕೆರೆ ವಿಜಯ್‌ಕುಮಾರ್ ಸೇರಿದಂತೆ ವಿವಿಧ ಕಾಂಗ್ರೆಸ್ ಮುಖಂಡರು ಅಭಿನಂದಿಸಿದ್ದಾರೆ.

**ವರದಿ : ಎಸ್ ರವಿ ಹೊನ್ನೇನಹಳ್ಳಿ**

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State